(2) ಸದರಿ ಸಂಗತಿಯು (ನಮ್ಮ ಠರಿಯಾಗಿ) ಅವಸರವಾಗಿ ಇತ್ಯರ್ಥಪಡಿಸಿಕ್ಕೆ ಯೋಗ್ಯವಾದದ್ದೆಂತ ಕೋರ್ಟ್‌ನವರು ಅಭಿಪ್ರಾಯಪಟ್ಟರೆ, ಸದರೀ ಅರ್ಜಿಗೆ ಸಂಬಂಧಿಸಿದ ಇರುವಂತವರ ಪೈಕಿ ಕೋರ್ಟ್‌ನವರು ಯುಕ್ತವೆಂದು ತಿಳಿಕೊಳ್ಳುವಂಥಾ ಜನರಿಗೆ ಸದರೀ ಅರ್ಜಿಯು ತಲಪುವಂತೆ ಜಾರಿ ಮಾಡಿಸತಕ್ಕದ್ದು ಮತ್ತು ಅವರು ತನಿಖಿ ಸಮಯದಲ್ಲಿ ಹಾಜರು ಇರಬಹುದು.

(3) ಸಂರಕ್ಷಕನು ಸಂಗತಿಗಳನ್ನು (ಪ್ರಮಾಣಿಕ) ಬಳ್ಳಿ ಅರಿಕೆಯಿಂದ ಅರ್ಜಿಯಲ್ಲಿ ಹೇಳಿರದ್ದು, ಕೋರ್ಟ್‌ನವರು ಕೊಟ್ಟ ಅಭಿಪ್ರಾಯ, ಆಲೋಚನೆ, ಯಾ ಆಜ್ಞೆಗಳಿಗೆ ನಡಕೊಂಡಲ್ಲಿ, ಆತನೆ ಸ್ವಂತ ಜವಾಬ್ದಾರಿ ಇರುವಷ್ಟರಮಟ್ಟಿಗೆ, ಕೆಲಸದ ವಿಷಯವನ್ನು ಕುರಿತು ಆತನು ಸಂರಕ್ಷಕನಾಗಿ ನಡಸತಕ್ಕ ಕೆಲಸಗಳನ್ನು ಸರಿಯಾಗಿ ನಡಿಸಿರುವದಾಗಿ, ತನಿಖೆ ಮಾಡತಕ್ಕದ್ದು.

34. ಒಬ್ಬ ಸಂರಕ್ಷಣೆಯೊಳಗಿರುವವನ ಆಸ್ತಿ ರಕ್ಷಕನು ಕೋರ್ಟ್‌ನವರಿಂದ ನೇಮಿಸಲ್ಪಟ್ಟಲ್ಲಿ ಯಾ ವಿಧಿಸಿ ಹೇಳಲ್ಪಟ್ಟಲ್ಲಿ, ಮತ್ತು ಅಂಥಾ ರಕ್ಷಕನು ದಿವ್ಯಾಳಿಯವನಲ್ಲವಾದರೆ ಲಿಕ್ವಿಡೇಷನ್ ಕೋರ್ಟ್‌ನವರಿಂದ ಕೋರ್ಟ್‌ನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಆಸ್ತಿರಕ್ಷಕನ ಬದ್ಧತೆಗಳು.

(a) ಕೋರ್ಟ್‌ನವರಿಂದ ಅಪೇಕ್ಷಿಸಲ್ಪಟ್ಟಲ್ಲಿ, ನಿರ್ದೇಶಿಸೋಣಾದ ಸಮೂಹಕ್ಕೆ ಕೂಡಿದ ಮಟ್ಟಿಗೆ ಅನುಸರವಾಗಿ, ಜಾಮೀನು ಕೊಡಿಸುವಂತೆ ಮಾಡಿಸಲ್ಪಟ್ಟಲ್ಲಿ, ಸದರಿ ರಕ್ಷಣೆಯೊಳಗಿರುವವನ ಆಸ್ತಿ ಕುರಿತು ತಾನು ಪಡಕೊಳ್ಳಬಹುದಾದ್ದನ್ನು ಕುರಿತು ಸದರಿ ರಕ್ಷಕನು ಸಂತೃಪ್ತಿಯಾಗಿ ಲೆಕ್ಕ ಒಪ್ಪಿಸುವದಾಗಿ ಮತ್ತು ಅಂತಾ ಆಸ್ತಿಯನ್ನು ಕೋರ್ಟ್‌ನವರ ಆಜ್ಞೆಯಂತೆ ಒಪ್ಪಿಸುವದಾಗಿ ಬಾಂಡು ಬರೆದುಕೊಡುವದಾಗಿ ಜಾಮೀನುದಾರರಿಂದ ಸಹಿ ಮಾಡಿಸಿಕೊಂಡು, ತಾತ್ಕಾಲಿಕ ಜಡ್ಜಿಯಾಗಿರುವಂತವನು ಉಪಯೋಗಾರ್ಥವಾಗಿ, ಕೋರ್ಟ್‌ನ ಜಡ್ಜಿಗೆ ಒಂದು ಪತ್ರ ಬರಕ್ಕೊಡತಕ್ಕದ್ದು;

(b) ಕೋರ್ಟ್‌ನವರಿಂದ ಅಪೇಕ್ಷಿಸೋಣಾದರೆ, ತಾನು ಕೋರ್ಟ್‌ನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ತಾರೀಖಿನಿಂದ ಆರು ತಿಂಗಳ್ಳೊಳಗೆ, ಯಾ ಕೋರ್ಟ್‌ನವರು ಅಪ್ಪಣೆ ಕೊಡುವವೇರಗೆ ಕಂತಾ ಬೇರೆ ಯಾವದೊ ತಿಳಿಗೆ ಳಗೆ, ಸತ್ಯವೆಂದು ಒಪ್ಪಿಸಿಕೊಳ್ಳುವ ತಾರೀಖಿನವರೆಗೆ ಸದರಿ ರಕ್ಷಿತನಿಗೆ ಸೇರಿದ ಸ್ಥಿರ ಆಸ್ತಿಯನ್ನು ಆತನಬಗ್ಗೆ ತನ್ನ ವಶಕ್ಕೆ ತೆಗೆದುಕೊಳ್ಳುವ ಹಕ್ಕಿನವನ್ನು ಮತ್ತು ಜೀರೆ ಜರ ಆಸ್ತಿಯನ್ನು ಮತ್ತು ಆ ತಾರೀಖಿಗೆ ಸದರಿ ರಕ್ಷಿತನಿಗೆ ವಸೂಲು ಬರತಕ್ಕ್ಯಾ ಆತನಿಂದ ಹೊರತಕ್ಕ ಸಾಲಗಳನ್ನು ಸಹ ನಮೂದಿಸಿ ಒಂದು ತಪ್ಪಿಲೆಯನ್ನು ಕೋರ್ಟ್‌ಗೆ ಒಪ್ಪಿಸತಕ್ಕದ್ದು;

(c) ಕೋರ್ಟ್‌ನವರಿಂದ ಅಪೇಕ್ಷಿಸೋಣಾದರೆ, ತನ್ನ ಲೆಕ್ಕ ಪತ್ರಗಳನ್ನು ಕೋರ್ಟ್‌ನವರು ಆಗಿಂದಾಗ್ಗೆ ಅಪ್ಪಣೆ ಕೊಡುವ ನಮೂನೆಯಲ್ಲಿ ಮತ್ತು ಕಾಲಗಳಲ್ಲಿ ಕೋರ್ಟ್‌ನಲ್ಲಿ ತೋರಿಸತಕ್ಕದ್ದು;

(d) ಕೋರ್ಟ್‌ನವರಿಂದ ಅಪೇಕ್ಷಿಸೋಣಾದರೆ, ಆ ಲೆಕ್ಕಗಳ ಮೇರೆಗೆ ತನ್ನಿಂದ ಪಲ್ಲಟಕ್ಕೆ ಶಿಲ್ಕು ಬಾಕಿಯಿಸನ್ನು ಯಾ ಆ ಪೈಕಿ ಕೋರ್ಟ್‌ನವರು ಅಪ್ಪಣೆ ಕೊಡುವಷ್ಟನ್ನು, ಸದರಿ ಕೋರ್ಟ್‌ನವರಿಗೆ ಪಾವತಿ ಮಾಡತಕ್ಕದ್ದು ಮತ್ತು ಕೋರ್ಟ್‌ನಲ್ಲಿ ಪಾವತಿ ಮಾಡತಕ್ಕದ್ದು;

(e) ಸದರಿ ಸಂರಕ್ಷಣೆಯೊಳಗಿರುವವನ ಆಸ್ತಿಯ ಪಟ್ಟುವಳಿಯಿಂದ ಕೋರ್ಟ್‌ನವರು ಆಗಿಂದಾಗ್ಗೆ ಅಪ್ಪಣೆ ಕೊಡುವಷ್ಟು ಆವಶ್ಯವನ್ನು, ಸದರಿ ರಕ್ಷಿತನ ಮತ್ತು ಅವನ ಆಶ್ರಯದಲ್ಲಿರುವ ಮನುಷ್ಯರ ಸಂರಕ್ಷಣೆ, ವಿದ್ಯಾಭ್ಯಾಸ ಮತ್ತು ಅಭಿವೃದ್ಧಿಗಾಗಿ ಮತ್ತು ಆತನಿಗೆ ಯಾ ಸದರಿ ಮನುಷ್ಯರ ಪೈಕಿ ಯಾರಿಗಾದರೂ ಸಂಬಂಧಿಸಬಹುದಾದ ಆಚರಣೆಗಳನ್ನು ನಡಿಸುವ ಬಗ್ಗೆ ವಿನಿಯೋಗಿಸತಕ್ಕದ್ದು, ಮತ್ತು ಕೋರ್ಟ್‌ನವರು ಅಪ್ಪಣೆ ಕೊಟ್ಟ ಪಕ್ಷದಲ್ಲಿ, ಸದರಿ ಆಸ್ತಿಯನ್ನು ಪೂರ್ತಿ ಅಗಲಿ ಯಾ ಅದರ ಅಂಶವನ್ನು ಅಗಲಿ ಉಪಯೋಗಿಸತಕ್ಕದ್ದು.

35. ಸಂರಕ್ಷಣೆಯೊಳಗಿರುವವನ ಆಸ್ತಿ ಪಟ್ಟುವಳಿಯಿಂದ ತಾನು ಪಡಕೊಳ್ಳಬಹುದಾದ್ದನ್ನು ಕುರಿತು ಕ್ರಮವಾಗಿ ಲೆಕ್ಕ ಒಪ್ಪಿಸುವದಾಗಿ, ಕೋರ್ಟ್‌ನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ರಕ್ಷಕನು ಪತ್ರ (ಕರಾರು) ಬರಕೊಟ್ಟಲ್ಲಿ, ಸದರಿ ಕರಾರಿನ ಪತ್ರಗಳಿಗೆ ಆತನು ತಪ್ಪಿ ನಡಕೊಂಡದ್ದಾಗಿ ಕೋರ್ಟ್‌ನವರು ಮನವಿ ಪೂರ್ವಕ ಕೊಪ್ಪಲ್ಪಟ್ಟ ಅರ್ಜಿಯ ಮೇಲೆ ಸಮಾಧಾನ ಪಟ್ಟಲ್ಲಿ, ಜಾಮೀನು ಕುರಿತು ಅಂತಾ ಕೋರ್ಟ್‌ನವರು ಯುಕ್ತವೆಂತ ತಿಳಿಕೊಳ್ಳುವ ಶರ್ತಗಳ್ಳಮೇಲೆ, ಯಾ ಪಡಕೊಂಡ ಹಣವನ್ನು ಕೋರ್ಟ್‌ಗೆ ಪಾವತಿ ಮಾಡುವಂತೆ ನಿಬ್ಬಂಧಿಸಿ, ಅಥವಾ ಇತರ ವಿಧವಾಗಿ, ಸದರೀ ಪತ್ರದ ಹಕ್ಕನ್ನು ಜೀರೊಬ್ಬು

ಕಾರ್ಯನಿರ್ವಹಣೆ ಕುರಿತು ಪತ್ರ ಬರಕೊಂಡಲ್ಲಿ ರಕ್ಷಕನಮೇಲೆ ವ್ಯಾಜ್ಯ

ಯೋಗ್ಯನಾದ ಮನುಷ್ಯನಿಗೆ ಕೋರ್ಟಿನವರು ಒಪ್ಪಿಸಿಕೊಡಬಹುದು; ಮತ್ತು ಹಾಗೆ ಕೊಟ್ಟಲ್ಲಿ, ಸದರಿ ಮನುಷ್ಯನು ಆ ಪತ್ರವು ಸದರಿ ಕೋರ್ಟಿನ ಜಿಲ್ಲೆಯು ಹೆಸರಿನಲ್ಲಿ ಇಲ್ಲದೆ ತನ್ನ ಹೆಸರಲ್ಲೇ ಇದ್ದರೆ ಹ್ಯಾಗೋ ಅದೇ ರೀತಿಯಲ್ಲಿ ಸದರಿ ಪತ್ರದ ಮೇಲೆ ವ್ಯಾಜ್ಯಮಾಡಲು ಹಕ್ಕುಳ್ಳವನಾಗಿರತಕ್ಕದ್ದು. ಮತ್ತು ಸದರಿ ಕರಾರು ಹುಸಿ ನಡೆದ ಬಾಬಿನಲ್ಲಿ ಒರಟೀಕಾದ್ದನ್ನು ಸಂರಕ್ಷಣೆಯೊಳಗಿರುವವನ ಪಾರುಪತ್ಯಗಾರನಾಗಿ (ಟ್ರಸ್ಟಿ) ಬರಮಾಡಿಕೊಳ್ಳಲಿಕ್ಕೂ ಹಕ್ಕುದಾರನಾಗಿರತಕ್ಕದ್ದು.

ಕಾರ್ಯನಿರ್ವಾಹದ ಕುರಿತು ಪತ್ರ ಇಲ್ಲದ ಸಂಗತಿಯಲ್ಲಿ ರಕ್ಷಕನಮೇಲೆ ವ್ಯಾಜ್ಯ.

36. (1) ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಸಂರಕ್ಷಕನು ಮೇಲೆ ಹೇಳಿದ ಮೇರೆಗೆ ಒಂದು ಪತ್ರವನ್ನು ಬರಕೊಡದೆ ಇರುವ ಸಂಗತಿಯಲ್ಲಿ, ಯಾವನೊಬ್ಬ ಮನುಷ್ಯನಾಗಲಿ, ಸದ್ಭಾವನೆಯಿಂದ ಸ್ನೇಹಿತನೆಂಬ ಅಧಾರದಮೇಲೆ, ಸದರಿ ಸಂರಕ್ಷಣೆಯೊಳಗಿರುವವನು ಅಪಾಯಸ್ಥನಾಗಿರುವ ಯಾವ ಕಾಲದಲ್ಲಾದರೂ, ಮೇಲೆ ಹೇಳಿದ ಕರ್ತವ್ಯಗಳಂತೆ, ಸದರಿ ಸಂರಕ್ಷಕನಮೇಲೆ, ಯಾ ಆತನು ಮೃತಪಟ್ಟ ಸಂಗತಿಯಲ್ಲಿ ಆತನ ಪ್ರತಿನಿಧಿಯಮೇಲೆ, ಸದರಿ ಸಂರಕ್ಷಣೆಯೊಳಗಿರುವವನ ಆಸ್ತಿಯ ಬಾಬತ್ತು ಆತನು ಪಡಕೊಂಡಿರುವಂತಾದ್ದರ ಲೆಕ್ಕಾಚಾರದ ಬಗ್ಗೆ, ಕೋರ್ಟಿನವರ ಅಪ್ಪಣೆ ಪಡೆದುಕೊಂಡು ವ್ಯಾಜ್ಯ ದಾವಲು ಮಾಡಬಹುದು; ಮತ್ತು, ಆ ವ್ಯಾಜ್ಯಮೂಲಕ ಸದರಿ ಸಂರಕ್ಷಕನಿಂದ ಯಾ ಸಂಗತ್ಯಾನುಸಾರವಾಗಿ ಅವನ ಪ್ರತಿನಿಧಿಯಿಂದ ಪಾವತಿಯಾಗತಕ್ಕದ್ದೆಂದು ನಿರ್ಣಯಿಸಲ್ಪಟ್ಟ ಬೊಬಲಗನ್ನು, ಸಂರಕ್ಷಣೆಯಲ್ಲಿರುವವನ ಪಾರುಪತ್ಯಗಾರನಾಗಿ ಬರಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ನಿಯಮಗಳು, ಸಂರಕ್ಷಕನಮೇಲೆ ಮಾಡಿದ ವ್ಯಾಜ್ಯಕ್ಕೆ ಸಂಬಂಧಿಸುವವ್ಯರಮಟ್ಟಿಗೆ, ಸಿವಿಲ್ ಪ್ರೊಸಿಜ್ಯೂರ್ ಕೋಡಿನ, ಈ ರೆಗ್ಯುಲೇಷನ್ನಿನಿಂದ ತಿದ್ದಲ್ಪಟ್ಟ 440ನೇ ಪ್ರಕರಣದ ನಿಯಮಗಳಿಗೆ ಒಳಪಡತಕ್ಕದ್ದು.

ಮೃತಯಾಗಿರುವ ರಕ್ಷಕನ ಸಾಧಾರಣ ಜವಾಬ್ದಾರಿ.

37. ಯಾವ ಪರಿಹಾರಕ್ಕೆ, ಅದು ಹಿಂದಿನ ಕಡೇ ಎರಡು ಪ್ರಕರಣಗಳ ಪೈಕಿ ಯಾವದೊಂದರಲ್ಲಿಯಾಗಲಿ ಸ್ಪಷ್ಟವಾಗಿ ನಿರ್ದೇಶಿಸಲ್ಪಡದೆ ಇದ್ದಾಗ್ಯೂ, ಇತರ ಯಾವ ಪ್ರಯೋಜನ ಪ್ರತಿಗ್ರಹೀತನಿಗೆ (Beneficiary) ಅಥವಾ ಅವನ ಪ್ರತಿನಿಧಿಗೆ ತನ್ನ ಟ್ರಸ್ಟಿಯು ಅಥವಾ ಅವನ ಪ್ರತಿನಿಧಿಯ ಮೇಲೆ ಹಕ್ಕು ಇರುತ್ತದೋ ಅಂತಾ ಪರಿಹಾರವನ್ನು, ಬಿಚ್ಚಿ ಆಪಾಯಸ್ಥನು ಅಥವಾ ಅವನ ಪ್ರತಿನಿಧಿಯು ತನ್ನ ಸಂರಕ್ಷಕನಿಂದ ಅಥವಾ ಅವನ ಪ್ರತಿನಿಧಿಯಿಂದ ಹೊಂದತಕ್ಕದ್ದಲ್ಲವೆಂದು ಸದರಿ ಪ್ರಕರಣಗಳ ಪೈಕಿ ಯಾವದೊಂದರ ನಿಯಮವನ್ನೂ, ಅನ್ವಯಿಸಕೂಡದು.

ಸಂರಕ್ಷಕನ ಉದ್ಯೋಗದ ಅಂತ್ಯ.

ಸಹರಕ್ಷಕರ ಪೈಕಿ ಉಳಿದವನ ಹಕ್ಕು.

38. ಇಬ್ಬರು ಯಾ ಹೆಚ್ಚು ಮಂದಿ ಸಂರಕ್ಷಕರ ಪೈಕಿ ಒಬ್ಬನು ಮೃತನಾದರೆ, ಕೋರ್ಟಿನವರು ಪುನಃ ನೇಮಿಸುವತನಕ ಸದರಿ ಸಂರಕ್ಷಣೆಯ ಉದ್ಯೋಗವು ಉಳಿದವನ ಯಾ ಉಳಿದವರಲ್ಲಿಯೇ ಪ್ರವರ್ತಿಸುತ್ತದೆ.

ಸಂರಕ್ಷಕನನ್ನು ಉದ್ಯೋಗದಿಂದ ತಪ್ಪಿಸೋಣ.

39. ಸಂಬಂಧಪಟ್ಟ ಯಾವನೊಬ್ಬ ಮನುಷ್ಯನ ಅರ್ಜಿಯ ಮೇಲಾಗಲಿ, ತಮ್ಮ ಸ್ವಂತ ಅಭಿಪ್ರಾಯದಮೇಲೆ ಆಗಲಿ ಕೋರ್ಟಿನವರು, ಈ ಕೆಳಗಣ ಸಬಬುಗಳ ಪೈಕಿ ಯಾವದಕ್ಕೂ ಸ್ತರವಾದರೂ, ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ, ಅಥವಾ ವಿಲ್ಲಿನಿಂದ ಯಾ ಟೇರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನನ್ನು ಕೆಲಸದಿಂದ ತಪ್ಪಿಸಬಹುದು; ಅವು ಯಾವವೆಂದರೆ:—

(a) ತನಗೆ ಭರವಸದಮೇಲೆ ಒಪ್ಪಿಸಿದ ಸ್ಥಿತಿಯನ್ನು ಮರುಪಯೋಗ ಮಾಡಿದರೆ;

(b) ತನ್ನ ಭರವಸದ ಕೆಲಸಗಳನ್ನು ಯಾವಾಗಲು ನಡಿಸದೆ ಇದ್ದರೆ;

(c) ತನ್ನ ಭರವಸದ ಕೆಲಸಗಳನ್ನು ನಡಿಸಲು ಅಯೋಗ್ಯನಾದರೆ;

(d) ತನ್ನ ರಕ್ಷಣೆಯಲ್ಲಿರುವವನನ್ನು ದುರ್ಗುಣ ಮಾಡಿದರೆ ಅಥವಾ ಅತನನ್ನು ಸರಿಯಾಗಿ ಪರಾಮರಿಸುವದಲ್ಲಿ ಉಪೇಕ್ಷಿಸಿದರೆ;

(e) ಈ ರೆಗ್ಯುಲೇಷನಿನ ಯಾವ ನಿಯಮವನ್ನು ಅಥವಾ ಕೋರ್ಟಿನವರ ಯಾವ ಹುಕುಮನ್ನು ಹಟದಿಂದ ಅಲಕ್ಷ್ಯ ಮಾಡಿದರೆ;

(f) ತನ್ನ ರಕ್ಷಿತನ ಸಂರಕ್ಷಕನಾಗುವದಕ್ಕೆ ಅಯೋಗ್ಯನಾಗಿ ಮಾಡುವ ಕೆಟ್ಟ ನತೆಯುಳ್ಳವನೆಂತ ಕೋರ್ಟಿನವರು ಅಭಿಪ್ರಾಯ ಪಡುವಂತೆ ಬಂದು ತಪ್ಪು ಸಾಬೀತು ಪಟ್ಟರೆ;

(g) ತನ್ನ ಕೆಲಸಗಳನ್ನು ಪ್ರಮಾಣಿಕತೆಯಿಂದ ಮಾಡುವದಕ್ಕೆ ಬಾಧಕ ಉಂಟುಮಾಡುವಂತಾ ಸ್ವಪ್ರಯೋಜನ ಅತಗೆ ಇದ್ದರೆ;

(h) ಕೋರ್ಟಿನ ಅಧಿಕಾರದ ಸ್ಥಳಿಕ ಎಲ್ಲೆಗಳೊಳಗೆ ವಾಸಮಾಡುವದನ್ನು ಬಿಟ್ಟರೆ;

(i) ಆಸ್ತಿ ರಕ್ಷಕನಾಗಿರುವವನ ಸಂಗತಿಯಲ್ಲಿ, ಆತನು ದಿವಾಳಿ ತೆಗೆದರೆ, ಯಾ ನಾದಾರಾದರೆ;

(j) ಆಪ್ರಾಯಸ್ಥನು ಬಳಿಪಡುವ ಕಾನೂನು ಮೇರೆಗೆ ಸಂರಕ್ಷಕನ ರಕ್ಷಣೆಯು ನಿಂತು ಹೋಗುವ ಕಾರಣ, ಯಾ ನಿಂತು ಹೋಗಲಿಕ್ಕೆ ಗುರಿಯಾಗುವ ಕಾರಣದಿಂದ:

ಮೇಲಂತು ವಿಲ್ಲಿನಿಂದ ಯಾ ಬೇರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನನ್ನು, ಅವನು ಈ ರೆಗ್ಯುಲೇಷನಿನ ಮೇರೆಗೆ ವಿಧಿಸಿ ಹೇಳಲ್ಪಟ್ಟಿದ್ದಾಗ್ಯೂ ಇಲ್ಲದಿದ್ದಾಗ್ಯೂ, ಈ ಕೆಳಗಣ ಸಬಬುಗಳ ಮೇಲೆ ಕೆಲಸದಿಂದ ತಪ್ಪಿಸಕೂಡದು, ಅವು ಯಾವವೆಂದರೆ—

(a) ಸಂರಕ್ಷಕನನ್ನು ನೇಮಿಸಿದ ಮನುಷ್ಯನು ಮೃತಪಟ್ಟನಂತರ ಬಾಧಕ ಉಂಟುಮಾಡುವ ಸ್ವಪ್ರಯೋಜನವು ಹುಟ್ಟಿಗರೆ ವಿನಹಾ, ಅಥವಾ ಬಾಧಕ ಉಂಟುಮಾಡುವ ಸ್ವಪ್ರಯೋಜನವು ಇರುವದು ನೊತ್ತಾಗದೆ ಸದರಿ

ಮನುಷ್ಯನು ನೇಮಕವನ್ನು ಮಾಡಿದನೆಂದು ಮತ್ತು ಸ್ಥಾಪಿಸಿದನೆಂದು ತೋರಿಸಲ್ಪಟ್ಟರೆ ವಿನಹಾ, (g) ಕಲಮಿನಲ್ಲಿ ನಮೂದಿಸಿದ ಸಬಬ್ಕ್ಕೆ ಅಥವಾ

(b) ಸದರಿ ಸಂರಕ್ಷಕನು, ಸಂರಕ್ಷಕನ ಕೆಲಸಗಳನ್ನು ನಿರ್ವಹಿಸುವದ್ರು, ಕೋರ್ಟ್ನವರ ಅಭಿಪ್ರಾಯದಲ್ಲಿ, ಅವನಿಗೆ ಅನಾರ್ಥವಾಗುವಂತೆ ಬಂದು ವಾಸಸ್ಥಾನವನ್ನು ಮಾಡಿಕೊಂಡ ವಿನಹಾ, (h) ಕಲಮಿನಲ್ಲಿ ನಮೂದಿಸಿದ ಸಬಬ್ಕ್ಕೆ

ಸಂರಕ್ಷಕನ ವಿವೋಚನೆ.

40. (1) ಕೋರ್ಟ್ನವರಿಂದ ನೇಮಿಸಲ್ಪಟ್ಟ್ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ಸಂರಕ್ಷಕನು ತನ್ನ ಕೆಲಸವನ್ನು ಬಿಡುವದಕ್ಕೆ ಅಪೇಕ್ಷಿಸುವದಾದರೆ, ತನ್ನನ್ನು ನಿವಾರಣ ಮಾಡಬೇಕಾಗಿ ಅತನು ಕೋರ್ಟ್ಗೆ ಅರ್ಜಿ ಕೊಡಬಹುದು.

(2) ಸದರಿ ಅರ್ಜಿ ಕೊಡಲು ತಕ್ಕ ಕಾರಣ ಉಂಟೆಂತ ಕೋರ್ಟ್ನವರು ತಿಳಿಕೊಂಡರೆ, ಅವನನ್ನು ನಿವಾರಣ ಮಾಡತಕ್ಕದ್ದು. ಮತ್ತು ಅರ್ಜಿ ಕೊಡುವ ಸಂರಕ್ಷಕನು ಕಂಪ್ಯೂಟನವರಾದರೆ, ಮತ್ತು ನಿವಾರಣ ಮಾಡಬೇಕಾಗಿ ಅವನು ಅರ್ಜಿ ಕೊಡುವದನ್ನು ಗವರ್ಮೆಂಟಿನವರು ಒಪ್ಪಿದಲ್ಲಿ, ಕೋರ್ಟ್ನವರು ಯಾವ ಸಂಗತಿಯಲ್ಲಾದರೂ ಅವನನ್ನು ನಿವಾರಣ ಮಾಡತಕ್ಕದ್ದು.

ಸಂರಕ್ಷಕನ ಉದ್ಯೋಗ ನಿಂತುಹೋಗುವದು.

41. (1) ಒಬ್ಬ ವೀಕರಕ್ಷಕನ ಅಧಿಕಾರಗಳು ಈ ಕೆಳಗಣ ಕಾರಣಗಳಿಂದ ನಿಂತುಹೋಗುತ್ತವೆ—

(a) ಅತನು ಮೃತಪಟ್ಟದ್ದರಿಂದ ಯಾ ಅತನನ್ನು ಕೆಲಸದಿಂದ ತಪ್ಪಿಸಿದರಿಂದ ಯಾ ನಿವಾರಣ ಮಾಡಿದ್ದರಿಂದ;

(b) ರಕ್ಷಿತಳೊಳಗಿರುವವನ್ನು ಪ್ರಾಪ್ತವಯಸ್ಕನಾಗುವದರಿಂದ;

(c) ರಕ್ಷಿತಳೊಳಗಿರುವ ಆಸಾಮಿಯು ಜಿಂಗಸಾಗಿದ್ದರೆ, ಅಕೆಯು ವೀಕರಕ್ಷಕನಾಗಲು ಅಯೋಗ್ಯನಲ್ಲವ ಗಂಡಸಿಗೆ ಅಕೆಯು ಮದುವೆಯಾಗುವದರಿಂದ, ಅಥವಾ ರಕ್ಷಕನು ಕೋರ್ಟ್ನವರಿಂದ ನೇಮಿಸಲ್ಪಟ್ಟದ್ದರೆ ಯಾ ವಿಧಿಸಿ ಹೇಳಲ್ಪಟ್ಟದ್ದರ್ನಿಂದ ಕೋರ್ಟ್ನವರ ಅಭಿಪ್ರಾಯದಲ್ಲಿ, ಹಾಗೆ ಅಯೋಗ್ಯನಲ್ಲದ ಗಂಡಸಿಗೆ ಅಕೆಯು ಮದುವೆಯಾಗುವದರಿಂದ; ಅಥವಾ

(d) ರಕ್ಷಣೆಯೊಳಗಿರುವವನ್ನ ತಂದೆಯು, ಅತನ ವೀಕರಕ್ಷಕನಾಗಲು ಅಯೋಗ್ಯನಾದ ಸಂಗತಿಯಲ್ಲಿ, ಸದರಿ ತಂದೆಯು ಅಯೋಗ್ಯತೆಯು ನಿಂತುಹೋಗುವದರಿಂದ; ಅಥವಾ ಸದರಿ ತಂದೆಯು ಹಾಗೆ ಅಯೋಗ್ಯನೆಂತ ಕೋರ್ಟ್ನವರ ಅಭಿಪ್ರಾಯದಲ್ಲಿ ಅತನ ಅಯೋಗ್ಯತೆಯು ನಿಂತುಹೋಗುವದರಿಂದ.

(2) ಅನ್ಯ ರಕ್ಷಕನ ಅಧಿಕಾರಗಳು ಈ ಕೆಳಗಣ ಕಾರಣಗಳಿಂದ ನಿಂತುಹೋಗುತ್ತವೆ—

(a) ಅತನು ಮೃತಪಟ್ಟದ್ದರಿಂದ, ಅತನನ್ನ ಕೆಲಸದಿಂದ ತಪ್ಪಿಸಿದರಿಂದ ಯಾ ನಿವಾರಣ ಮಾಡಿದ್ದರಿಂದ;

(b) ರಕ್ಷಣೆಯೊಳಗಿರುವವಳು ಪ್ರಾಪ್ತವಯಸ್ಕಳಾಗುವದರಿಂದ.

(3) ಯಾವ ಸ್ಥಾನದಿಂದಿದ್ದಾದರೂ ಒಬ್ಬ ಸಂರಕ್ಷಕನ ಅಧಿಕಾರಗಳು ನಿಂತು ಹೋದಾಗ್ಯೂ, ರಕ್ಷಿತನಿಗೆ ಸೇರಿ ಇದ್ದು ಸಂರಕ್ಷಕನ ಸ್ವಾಧೀನದಲ್ಲಿಯಾ ವೀಲ್ಡ್ ವಿಚಾರಣೆಯಲ್ಲಿರುವ ಅಸ್ತಿಯನ್ನು, ಅಥವಾ ರಕ್ಷಿತನ ಪ್ರಕೃತದ ಯಾ ಮುಂಚಿನ ಆಸ್ತಿಗೆ ಸಂಬಂಧಿಸುವಂತಾಪ್ಪಾಗಿ ಸಂರಕ್ಷಕನು ಸ್ವಾಧೀನದಲ್ಲಿ ಯಾ ವೀಲ್ಡ್ ವಿಚಾರಣೆಯಲ್ಲಿರುವ ಯಾವದಾವರೂ ಲೆಕ್ಕಗಳನ್ನು, ತಾವು ಅಪ್ಪಣೆ ಕೊಡುವ ವೇರೆಗೆ ಒಪ್ಪಿಸುವಂತೆ, ಸದರಿ ಸಂರಕ್ಷಕನನ್ನು ಯಾ ಅವನು ಮೃತಪಟ್ಟರೆ ಅವನ ಪ್ರತಿನಿಧಿಯನ್ನು ಕೋರ್ಟ್ನವರು ಆಜ್ಞಾಪಿಸಬಹುದು.

(4) ಕೋರ್ಟ್ನವರು ಅಪ್ಪಣೆ ಕೊಟ್ಟ ವೇರೆಗೆ ಅವನು ಸದರಿ ಆಸ್ತಿಯನ್ನು ಯಾ ಲೆಕ್ಕಗಳನ್ನು ಒಪ್ಪಿಸಿದ್ದಲ್ಲಿ, ತದನಂತರ ಗೋಚರವಾಗಿಬರುವಾದಂತಾ ವೇಸೆಲ ಪಕ್ಷದಲ್ಲಿ ಹೊರತು, ಆತನ ಸಮಸ್ತ ಬದ್ಧತೆಗಳಿಂದ ಆತನನ್ನು ವಿಮೋಚನೆ ಪಡಿಸಿರುವದಾಗಿ ಕೋರ್ಟ್ನವರು ವಿಧಿಸಿ ಹೇಳಬಹುದು.

ಮೃತಪಟ್ಟ ವಿವೋಚಿಸಲ್ಪಟ್ಟ್ಯಾ ಯಾ ಕೆಲಸದಿಂದ ತೆಗೆದುಹಾಕಲ್ಪಟ್ಟವನ ಬದಲಾಗಿ ಸಂರಕ್ಷಕನನ್ನು ನೇಮಿಸೋಣ.

42. ಕೋರ್ಟ್ನವರಿಂದ ನೇಮಿಸಲ್ಪಟ್ಟ್ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ಸಂರಕ್ಷಕನು ವಿವೋಚಿಸಲ್ಪಟ್ಟರೆ, ಅಥವಾ ರಕ್ಷಿತನು ಒಳಪಡುವ ಕಾನೂನು ವೇರೆಗೆ ಸಂರಕ್ಷಕನು ಕೆಲಸ ನೋಡಲು ಹಕ್ಕುದಾರನಾಗಿರುವದು ನಿಂತುಹೋದರೆ, ಅಥವಾ ಅಂತಾ ಯಾವನೊಬ್ಬ ಸಂರಕ್ಷಕನು ಅಪಘಾ ವಿಲ್ಲಿನಿಂದ ಯಾ ಜೀರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಸಂರಕ್ಷಕನು ಕೆಲಸದಿಂದ ತಪ್ಪಿಸಲ್ಪಟ್ಟರೆ ಯಾ ಮೃತಪಟ್ಟರೆ, ಅಥವಾ ಕೋರ್ಟ್ನವರು, ತಮ್ಮ ಸ್ವಂತ ಅಭಿಪ್ರಾಯದ ವೇರೆಗೆ, ಯಾ IIನೆ ಅಧ್ಯಾಯದಂತೆ ಅರ್ಜಿ ಮಾಡಲ್ಪಟ್ಟಲ್ಲಿ, ರಕ್ಷಿತನು ಇನ್ನೂ ಅವ್ಯಾಮಸ್ಥನಾಗಿದ್ದಲ್ಲಿ, ಇನ್ನೊಬ್ಬನನ್ನು ಅತನ ದೇಹದ, ಯಾ ಸಂಗತ್ಯಾನುಸಾರವಾಗಿ, ಅಸ್ತಿಯ ಯಾ ಇವೆರಡರ ಸಂರಕ್ಷಕನಾಗಿ ನೇಮಿಸಬಹುದು ಯಾ ವಿಧಿಸಿ ಹೇಳಬಹುದು.

33

4ನೆ ಅಧ್ಯಾಯ.

ಉಪನಿಯಮಗಳು.

ಸಂರಕ್ಷಕರ ನಡತೆಯನ್ನು ಯಾ ವ್ಯವಹಾರಗಳನ್ನು ಕ್ರಮಪಡಿಸುವ ಬಗ್ಗೆ ಹುಕುಂಗಳು ಮತ್ತು ಸದರಿ ಹುಕುಂಗಳ ಜಾರಿ.

43. (1) ಕೋರ್ಟ್‌ನವರು, ಸಂಬಂಧಪಟ್ಟ ಯಾವನೊಬ್ಬನ ಅರ್ಜಿ ಮೇಲೆ ಆಗಲಿ ಯಾ ತಾವಾಗಿಯೇ ಆಗಲಿ, ಕೋರ್ಟ್‌ನವರಿಂದ ನೇಮಕ ಮಾಡಿದ ಯಾ ವಿಧಿನಿ ತಿಳಿಸೋಣಾದ ಯಾವನೊಬ್ಬ ಸಂರಕ್ಷಕನ ನಡತೆ ಯಾ ವ್ಯವಹಾರಗಳನ್ನು ಕ್ರಮಪಡಿಸುವಂತಾ ಹುಕುಂ ಕೊಡಬಹುದು.

(2) ಯಾವನೊಬ್ಬ ರಕ್ಷಿತನ ಕುರಿತು ಒಬ್ಬನಕ್ಕಿಂತ ಹೆಚ್ಚು ಮಂದಿ ಸಂರಕ್ಷಕರು ಇದ್ದು ರಕ್ಷಿತನ ಕ್ಷೇಮವನ್ನು ಕುರಿತ ಪ್ರಕರಣೆಯಲ್ಲಿ ಅವರು ಏಕಮತವಾಗದೆ ಹೋದರೆ, ಅವರ ಪೈಕಿ ಯಾರಾಗಲಿ ಕೋರ್ಟ್‌ನವರ ಅನುಜ್ಞೆ ಬಗ್ಗೆ ಕೋರ್ಟ್‌ಗೆ ಮನವಿ ಮಾಡಿಕೊಳ್ಳಬಹುದು, ಮತ್ತು ಕೋರ್ಟ್‌ನವರು ವಿವಾದದಲ್ಲಿರುವ ಸಂಗತಿ ಕುರಿತು ತಮಗೆ ಯುಕ್ತವೆಂದು ತೋರುವ ಹುಕುಂ ಕೊಡಬಹುದು.

(3) (1)ನೇ ಯಾ (2)ನೇ ಉಪಪ್ರಕರಣಕ್ಕನುಗುಣವಾಗಿ ಮಾಡತಕ್ಕ ಒಂದು ಹುಕುಮಿನ ಉದ್ದೇಶವು ಕಾಲವಿಳಂಬದಿಂದ ನಿಷ್ಫಲವಾಗತಕ್ಕಾದ ರೀತಿಯಲ್ಲಿ ವಿನಂತಿ ಕೋರ್ಟ್‌ನವರು, ಹುಕುಂ ಕೊಡುವದಕ್ಕೆ ಮುಂಚಿತವಾಗಿ, ಅದರ ಬಗ್ಗೆ ಆದ ಅರ್ಜಿ ವಿಷಯವಾಗಿ, ಯಾ ಸಂಗತ್ಯಾನುಸಾರವಾಗಿ ಹುಕುಂ ಕೊಡಬೇಕೆಂದು ಕೋರ್ಟ್‌ನವರ ಅಭಿಪ್ರಾಯವಿರುವ ವಿಷಯವಾಗಿ ಬಂದು ನೋಟಿಸನ್ನು, (1)ನೇ ಉಪಪ್ರಕರಣಕ್ಕನುಗುಣವಾದ ಸಂಗತಿಯಲ್ಲವಾದರೆ ಸದರಿ ಸಂರಕ್ಷಕನಿಗೂ, (2)ನೇ ಉಪಪ್ರಕರಣಕ್ಕನುಗುಣವಾದ ಸಂಗತಿಯಲ್ಲವಾದರೆ ಮನವಿ ಮಾಡಿಕೊಳ್ಳದಿರುವ ಸದರಿ ಸಂರಕ್ಷಕನಿಗೂ, ಕೊಡುವಂತೆ ವಿಧಿಸತಕ್ಕದ್ದು.

(4) (1)ನೇ ಯಾ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಹುಕುಮಿಗೆ ಅವಿಧೇಯವಾಗಿ ನಡಕೊಂಡ ಸಂಗತಿಯಲ್ಲಿ, ಸಿವಿಲ್ ಪ್ರೊಸೀಜ್ಯೂರ್ ಕೋಡಿನ 492ನೇ ಅಥವಾ 493ನೇ ಪ್ರಕರಣ ಪ್ರಕಾರ ಕೊಡಲ್ಪಟ್ಟ ಇಂಜಂಕ್ಷನ್ ಜಾರಿ ನಡಿಸುವ ರೀತಿಯಲ್ಲಿ, (1)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲವಾದರೆ, ಸದರಿ ಸಂರಕ್ಷಕನು ಪ್ರತಿವಾದಿಯಾಗಿಯೂ ರಕ್ಷಿತನು ವಾದಿಯಾಗಿಯೂ, (2)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲವಾದರೆ ಮನವಿ ಮಾಡಿಕೊಂಡ ಸಂರಕ್ಷಕನು ವಾದಿಯಾಗಿಯೂ ಇನ್ನೊಬ್ಬ ಸಂರಕ್ಷಕನು ಪ್ರತಿವಾದಿಯಾಗಿಯೂ ಇದ್ದಾರೆ ಹ್ಯಾಗೋ ಹಾಗೆಯೇ, ಸದರಿ ಹುಕುಮಿನ ಜಾರಿ ನಡಿಸಲ್ಪಡಬಹುದು.

(5) (2)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲಿ ಹೊರತು, ಈ ಪ್ರಕರಣದ ಯಾವ ನಿಯಮವೂ, ಉದ್ಯೋಗ ಪ್ರಯುಕ್ತವಾಗಿ ಸಂರಕ್ಷಕನಾಗಿರುವ ಡಿಪ್ಯುಟಿ ಕಮಿಷನರಿಗೆ ಪ್ರಯೋಗವಾಗುವದಿಲ್ಲ.

ಅಧಿಕಾರ ನೆರವೇರ್ಪಿನ ಹೊರಗೆ ರಕ್ಷಿತನನ್ನು ತೆಗದುಕೊಂಡು ಹೋದರೆ ದಂಡನೆ.

44. ಒಬ್ಬ ರಕ್ಷಿತನ ಕುರಿತು ಕೋರ್ಟ್‌ನವರು ತಮ್ಮ ಅಧಿಕಾರವನ್ನು ಚಲಾಯಿಸುವದರಲ್ಲಿ ಆತಂಕಪಡಿಸುವ ಉದ್ದೇಶದಿಂದ ಯಾ ಆತನ ಮೇಲೆ ಹಕ್ಕು ಸಾಧಿಸುವ ಹಾಗೆ, 26ನೇ ಪ್ರಕರಣದ ನಿಯಮಗಳಿಗೆ ವಿರೋಧವಾಗಿ, ಕೋರ್ಟ್‌ನವರಿಂದ ನೇಮಿಸೋಣಾದ ಯಾ ವಿಧಿನಿ ತಿಳಿಸೋಣಾದ ಒಬ್ಬ ಸಂರಕ್ಷಕನು ಆತನನ್ನು ಸದರಿ ಕೋರ್ಟ್‌ನವರ ಅಧಿಕಾರಸ್ಥಳಿಕ ಎಲ್ಲೆಗಳ ಹೊರಗೆ ತೆಗದುಕೊಂಡು ಹೋದರೆ ಸದರಿ ಸಂರಕ್ಷನು ಸದರಿ ಕೋರ್ಟ್‌ನವರ ಆಜ್ಞೆಗೆ ಮೂಲಕ, ಒಂದು ಸಾವಿರ ರೂಪಾಯಿಗೆ ಮೀರದ ಜುಲುಮಾನೆಗೆ, ಯಾ ಸಿವಿಲ್ ಜೈಲಿನಲ್ಲಿ ಆರು ತಿಂಗಳಿಗೆ ವ್ಯಾಪಿಸಬಹುದಾದ ಒಂದು ಅವಧಿಗೆ ಶಿಕ್ಷೆಗೆ, ಗುರಿಯಾಗತಕ್ಕದ್ದು.

ಅಲಕ್ಷ್ಯ ಮಾಡಿದರೆ ದಂಡನೆ.

45. (1) ಈ ಕೆಳಗೆಣ ಸಂಗತಿಗಳಲ್ಲಿ, ಅಂದರೆ :—

(a) ಒಬ್ಬ ಅಪ್ರಾಯಸ್ಥನನ್ನು ಕಾವಲಿನಲ್ಲಿಟ್ಟುಕೊಂಡಿರುವ ಮನುಷ್ಯನು, 12ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಗುಣವಾದ ಒಂದು ಅನುಜ್ಞೆಗೆ ಅನುಸಾರವಾಗಿ, ಆತನನ್ನು ಹಾಜರು ಮಾಡಲಿಕ್ಕೆ ಯಾ ಹಾಜರು ಮಾಡಿಸಲಿಕ್ಕೆ ತಪ್ಪಿದರೆ, ಅಥವಾ 25ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಗುಣವಾದ ಒಂದು ಹುಕುಮಿಗೆ ಅನುಸಾರವಾಗಿ ಅಪ್ರಾಯಸ್ಥನು ತನ್ನ ಸಂರಕ್ಷಕನ ಕಾವಲಿಗೆ ಮೇಲಿನ ಹೀಗೆ ಅವಂತೆ ಬಲಾತ್ಕರಿಸಲಿಕ್ಕೆ ತನ್ನಿಂದ ಕೂಡುವಷ್ಟು ಪ್ರಯತ್ನ ನಡಿಸದೆ ಹೋದರೆ, ಅಥವಾ

(b) ಕೋರ್ಟ್‌ನವರಿಂದ ನೇಮಕ ಮಾಡೋಣಾದ ಯಾ ವಿಧಿನಿ ತಿಳಿಸೋಣಾದ ಒಬ್ಬ ಸಂರಕ್ಷಕನು, 34ನೇ ಪ್ರಕರಣದ (b) ಕಲಮಿನ ಮೇರೆಗೆ ಯಾ ಸದರಿ ಕಲಮಿನಿಂದ ನಿಯಮಿತವಾದ ಕಾಲದೊಳಗಾಗಿ, ಆ ಕಲಮಿನಂತೆ ವಿಧಿಸಲ್ಪಟ್ಟ ಒಂದು ಸ್ಟೇಟಮೆಂಟನ್ನು ಕೋರ್ಟ್‌ನವರಿಗೆ ಒಪ್ಪಿಸಲಿಕ್ಕೆ, ಅಥವಾ ಅದೇ ಪ್ರಕರಣದ (c) ಕಲಮಿಗೆ ಅನುಸಾರವಾಗಿರುವ ಅನುಜ್ಞೆ ಪ್ರಕಾರ ಲೆಕ್ಕಗಳನ್ನು ತೋರಿಸಲಿಕ್ಕೆ, ಅಥವಾ ಅದೇ ಪ್ರಕರಣದ (d) ಕಲಮಿಗೆ ಅನುಸಾರವಾಗಿರುವ ಒಂದು ಅನುಜ್ಞೆ ಪ್ರಕಾರ ಸದರಿ ಲೆಕ್ಕಗಳ ಮೇಲೆ ತನ್ನಿಂದ ಸಲ್ಲತಕ್ಕ ಬಾಕಿಯನ್ನು ಕೋರ್ಟ್‌ನಲ್ಲಿ ಪಾವತಿ ಮಾಡಲಿಕ್ಕೆ, ತಪ್ಪಿದರೆ, ಅಥವಾ

(c) ಸಂರಕ್ಷಕನಾಗಿರುವದು ನಿಂತುಹೋದ ಒಬ್ಬ ಮನುಷ್ಯನು ಅಥವಾ ಅಂತಾ ಮನುಷ್ಯನ ಪ್ರತಿನಿಧಿಯು, 41ನೇ ಪ್ರಕರಣದ (3)ನೇ ಉಪಪ್ರಕರಣದಂತಾದ ಒಂದು ಅನುಜ್ಞೆಗನುಸಾರವಾಗಿ ಯಾವ ಸೊತ್ತನ್ನಾಗಲಿ, ಲೆಕ್ಕಗಳನ್ನಾಗಲಿ ಒಪ್ಪಿಸಲಿಕ್ಕೆ ತಪ್ಪಿದರೆ,

ಸದರಿ ಮನುಷ್ಯ ಯಾ, ಸಂಗತ್ಯಾನುಸಾರವಾಗಿ, ಸಂರಕ್ಷಕನು ಯಾ ಪ್ರತಿನಿಧಿಯು, ಕೋರ್ಟ್‌ನ ಹುಕುಮು ಮೂಲಕ 100 ರೂಪಾಯಿಗೆ ಮೀರದ ಜುಲುಮಾನೆಗೂ, ಆ ಅಜ್ಞೆಯನ್ನು ಅಲಕ್ಷ್ಯ ಮಾಡುವ ಪಕ್ಷದಲ್ಲಿ ಹಾಗೆ ಅಲಕ್ಷಿಸಿದ ಹೊದಲನೇ ದಿನ

ಸದ ಸಂತರ ಜೀಲುವಾಸೆಯನ್ನು ಬಿಟ್ಟಸದೇ ಇರುವ ಪಕ್ಷ ಐದು ರಿವಸಕ್ಕೆ ಕಡ್ಮೆ ರೂಪಾಯಿಗೆ ಮೀರದೆಯೂ, ಪರಂತು ಬಿಟ್ಟನವೀಲೆ ಜನೂರ-ರೂಪಾಯಿಗೆ ಮೀರದ, ಜೀಲುಮನೆಗೂ, ಮತ್ತು ಅವ್ಯಾಯಸ್ಥನನ್ನು ಹಾಜರು ಮಾಡ್ಸುವದಕ್ಕೆ ಯಾ ಮುಚ್ಚಳಿಕೆ ತಗಿಸುವದಕ್ಕೆ ಯಾ ಆತನು ಜಾಮೀನು ಕೊಟ್ಟಂತೆ ಏರ್ಪಾಡ್ತರಿಸುವದಕ್ಕೆ ಯಾ ಸ್ಯೇಟುಮೆಂಟನ್ನು ಬಿಟ್ಟುಸುವದಕ್ಕೆ ಜಪ್ತಿ ಲಿಕ್ಕ ಗಳನ್ನು ತೋರಿಸುವದಕ್ಕೆ ಯಾ ಬಾಕಿಯನ್ನು ಪಾವತಿ ಮಾಡುವದಕ್ಕೆ ಯಾ ಆಸ್ತಿಯನ್ನು ಬಿಟ್ಟುಸಿಕೊಡುವದಕ್ಕೆ, ಅಯಾ ಸ್ಥಂಗತ್ಯಾನುಸಾರವಾಗಿ, ಕೈಕೊಳ್ಳುವವರಗೂ ಸಬರ ಕೈದಿನಲ್ಲಿ ಇಡ್ಸುವದಕ್ಕೂ ಗುರಿಯಾಗತಕ್ಕದ್ದು.

(2) (1)ನೇ ಉಪಪ್ರಕರಣಕ್ಕನುಗುಣವಾಗಿ ಒಂದು ಬಿಟ್ಟುಗೆಯನ್ನು ಕೊಟ್ಟವರಿಂದ ಕೈದಿನಿಂದ ಬಿಡಲ್ಪಟ್ಟ ಮನುಷ್ಯನು ಕೋರ್ಟನವರಂದ ನಿಯಮಿಸಲ್ಪಟ್ಟು ಕಾಲದೊಳಗಾಗಿ ಸದರಿ ಬಿಟ್ಟುಗೆಯನ್ನು ನೆರವೇರಿಸಲಕ್ಕೆ ತಪ್ಪಿದರೆ, ಕೋರ್ಟನವರು ಅತನನ್ನು ಪುನಹಾ ಪೆಸ್ತಗಿ ಪಡಿಸಿಗೆ ಸಿವಿಲ್ ಜೈಲಿಗೆ ಪುನಹಾ ರವಾನಿಸಬಹುದು.

ಡಿಪ್ಯೂಟಿ ಕಮ್ಮಿಷನರುಗಳು ಮತ್ತು ಕೆಳಗಿನ ಕೋರ್ಟುಗಳು ರಿಪೋರ್ಟು ಮಾಡುವದು.

46. (1) ಈ ರೆಗ್ಯುಲೇಷನ್ ವೀರೆ ಯಾವದಾದರೂ ವ್ಯವಹರಣೆಯಲ್ಲಿ ಹುಟ್ಟುವ ಯಾವದಾದರೂ ಸಂಗತಿಯನ್ನು ಕುರಿತು, ಕೋರ್ಟನವರು ಡಿಪ್ಯೂಟಿ ಕಮ್ಮಿಷನರಿಂದಾಗಲಿ ತಮ್ಮ ಕೆಳಗಿನ ಯಾವ ಕೋರ್ಟುಗಳಿಂದಾಗಲಿ ರಿಪೋರ್ಟು ತರಿಸಿಕೊಳ್ಳಬಹುದು, ಮತ್ತು ಆ ರಿಪೋರ್ಟನ್ನು ರುಜುವಾತಾಗಿ ಎಣಿಸಬಹುದು.

(2) ಸದರಿ ರಿಪೋರ್ಟನ್ನು ತಯಾರ್ಮಾಡುವ ಬಗ್ಗೆ ಡಿಪ್ಯೂಟಿ ಕಮ್ಮಿಷನರಾಗಲಿ, ಸೆಂಗತ್ಯಾನುಸಾರವಾಗಿ, ಕೆಳಗಿನ ಕೋರ್ಟನ ಜಡ್ಜಿಯಾಗಲಿ, ತನಗೆ ಅವಶ್ಯವೆಂದು ತೋರುವ ವಿಚಾರಣೆಯನ್ನು ನಡಿಸತಕ್ಕದ್ದು, ಮತ್ತು ಸದರಿ ವಿಚಾರಣೆ ಬಗ್ಗಾಗಿ ಸಿವಿಲ್ ಪ್ರೊಸೀಜ್ಯರ್ ಕೋಡಿನಿಂದ ಸಾಕ್ಷಿ ಕೊಡುವ ವಿಷಯವಾಗಿ ಯಾ ದಸ್ತಾವೇಜು ಹಾಜರು ಮಾಡುವ ವಿಷಯವಾಗಿ, ಸಾಕ್ಷಿಯನ್ನು ಹಾಜರಾಗಿರುವದಕ್ಕೆ ಬೆಲಾತ್ಕರಿಸಲು ಕೋರ್ಟನವರಿಗೆ ಕೊಡೋಣಾದ ಯಾವ ಅಧಿಕಾರವನ್ನಾದರೂ ನಡಿಸಿ ಬಹುದು.

ಅಪ್ಪೀಲ್ ಮಾಡಬಹುದಾದ ಹುಕುಮುಗಳು.

47. ಡಿಸ್ಟ್ರಿಕ್ಟ್ ಕೋರ್ಟನವರಿಂದ ಕೊಡೋಣಾದ ಈ ಕೆಳಗಿನ ಹುಕುಂಗಳ ಮೇಲೆ ಜೋಡ್ ಕೋರ್ಟಿಗೆ ಅಪ್ಪೀಲ್ ಇರತಕ್ಕದ್ದು,—

(a) 7ನೇ ಪ್ರಕರಣ ಪ್ರಕಾರ ಒಬ್ಬ ಸಂರಕ್ಷಕನನ್ನು ನೇಮಿಸಿ ಯಾ ವಿಧಿಸಹೇಳಿ ಯಾ ನೇಮಿಸಲು ಯಾ ವಿಧಿಸಿ ಹೇಳಲು ನಿರಾಕರಿಸಿ ಕೊಟ್ಟ ಹುಕುಂ; ಅಥವಾ

(b) 9ನೇ ಪ್ರಕರಣದ (g) ನೇ ಉಪ ಪ್ರಕರಣ ಪ್ರಕಾರ ಒಂದು ಅರ್ಜಿಯನ್ನು ವಾಪಸು ಮಾಡ್ಸುವದು; ಅಥವಾ

(c) 25ನೇ ಪ್ರಕರಣ ಪ್ರಕಾರ ಒಬ್ಬ ರಕ್ಷಿತನು ಆತನ ಸಂರಕ್ಷಕನ ಕಾವಲಿಗೆ ವಾಪಸ್ಸು ಹೋಗುವ ಬಗ್ಗೆ ಹುಕುಂ ಕೊಡುವದು ಯಾ ಕೊಡಲು ನಿರಾಕರಿಸುವದು; ಅಥವಾ

(d) 26ನೇ ಪ್ರಕರಣದ ಮೇರೆಗೆ ಒಬ್ಬ ಸಂರಕ್ಷಕಯಲ್ಲದವನನ್ನು ಕೋರ್ಟನವರಿಂದ ಕಾಯಂ ಸಂರಕ್ಷಕನಾಗಿ ತಗದು ಹಾಕಲು ಹೋಗಲಿಕ್ಕೆ ಅಪ್ಪಣೆಯನ್ನು ನಿರಾಕರಿಸುವದು ಅಥವಾ ಆ ಬಗ್ಗೆ ಖರ್ಚಗಳನ್ನು ಜಾರಿ ಸುವದು; ಅಥವಾ

(e) 28ನೇ ಯಾ 29ನೇ ಪ್ರಕರಣ ಪ್ರಕಾರ ಆ ಪ್ರಕರಣದಲ್ಲಿ ಸೂಚಿಸಿರುವ ಒಂದು ಕೃತ್ಯವನ್ನು ನಡಿಸಲಿಕ್ಕೆ ಸಂರಕ್ಷಕನಿಗೆ ಅಪ್ಪಣೆಯನ್ನು ನಿರಾಕರಿಸುವದು; ಅಥವಾ

(f) 32ನೇ ಪ್ರಕರಣದ ಪ್ರಕಾರ, ಒಬ್ಬ ಸಂರಕ್ಷಕನ ಅಧಿಕಾರಗಳನ್ನು ವಿವರಿಸುವದು, ಮಿತಪಡಿಸುವದು ಯಾ ವಿಸ್ತರಿಸುವದರ; ಅಥವಾ

(g) 39ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನನ್ನು ತೆಗದುಹಾಕುವದು; ಅಥವಾ

(h) 40ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನನ್ನು ನಿವಾರಣೆ ಮಾಡಲಿಕ್ಕೆ ನಿರಾಕರಿಸುವದು; ಅಥವಾ

(i) 43ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನ ನಡತೆಯನ್ನು ಯಾ ವ್ಯವಹರಣೆಯನ್ನು ಕ್ರಮಪಡಿಸುವದು ಯಾ ಸಹ ರಕ್ಷಕರುಗಳಿಗೆ ಪ್ರಾಮ್ಯವಲ್ಲದಿರುವ ವಿಷಯವನ್ನು ವ್ಯವಸ್ಥೆಪಡಿಸುವದು ಯಾ ಕುಳುಮಿನ ಜಾರಿ ನಡಿಸುವದು; ಅಥವಾ

(j) 44ನೇ ಯಾ 45ನೇ ಪ್ರಕರಣ ಪ್ರಕಾರ ದಂಡನೆಯನ್ನು ಹೊರಿಸುವದು.

ಬೇರೆ ಹುಕುಮುಗಳ ಅಪ್ಯೀಲಾತಿ.

43. ಹಿಂದಿನ ಹದೇ ಪ್ರಕರಣದಲ್ಲಿ ಮತ್ತು ಸಿವಿಲ್ ಪ್ರೊಸೀಜ್ಯರ್ ಕೋಡಿನ 629ನೇ ಪ್ರಕರಣದಲ್ಲಿ ನಿಬಂಧಿಸೋಣಾದ ಹೊರತು ಜೋಡ್ ಕೋರ್ಟಿನವರು, ಈ ರೆಗ್ಯುಲೇಷನ ವೀರೆಗೆ ಮಾಡಿರುವ ಯಾವ ಹುಕುಂ ಆದರೂ ಅಪ್ಪೀಲಾಗಿರತಕ್ಕದ್ದು, ಮತ್ತು ವ್ಯಾಜ್ಯ ಮೂಲಕವಾಗಲಿ ಯಾ ಇತರ ವಿಧದಿಂದಾಗಲಿ ವಿವಾದಕ್ಕೆ ಗುರಿಯಾಗಬಹುದು.

ಖರ್ಚುಗಳು.

49. ಬಿಟ್ಟು ಸಂರಕ್ಷಕನನ್ನು ಯಾ ಇತರ ಪುನುಷ್ಯನನ್ನು ಸಿವಿಲ್ ಜೈಲಿನಲ್ಲಿ ಹೋಪಿಸುವ ಖರ್ಚು ಸಹಿತ ಈ ರೆಗ್ಯುಲೇಷನಿನಂತಾವೆ ಯಾವದಾದರೂ ವ್ಯವಹರಣೆಯ ಖರ್ಚು, ಜೋಡ್ ಕೋರ್ಟನವರು ಈ ರೆಗ್ಯುಲೇಷನಿಗನುಗುಣವಾಗಿ ಮಾಡಿರುವ ನೇಮಗಳಿಗೆ ಒಳಪಟ್ಟು, ಸದರಿ ವ್ಯವಹರಣೆನಡೆವ ಕೋರ್ಟನವರ ಇಷ್ಟಾನುಸಾರವಾಗಿರತಕ್ಕದ್ದು.

50. (1) ನೇಮಗಳನ್ನು ಏರ್ಪಡಿಸಲು ಈ ರೆಗ್ಯುಲೇಷನ್ನಿನಿಂದ ಸ್ಪಷ್ಟವಾಗಿ ಯಾ ಅರ್ಥಾನುಸಂಬಂಧವಾಗಿ ಕೊಡೋಣಾದ ಬೇರೆ ಇತರ ಅಧಿಕಾರದೊಂದಿಗೆ ಜೇಫ್‌ಕೋರ್ಟ್‌ನವರು ಈ ಕೆಳಗಿನ ಸಂಗತಿಗಳನ್ನು ಕುರಿತು ಸದರಿ ರೆಗ್ಯುಲೇಷನ್ನಿಗೆ ಅನುಗುಣವಾಗುವಂತಾ ನೇಮಗಳನ್ನು ಏರ್ಪಡಿಸಬಹುದು—

ನೇಮಗಳನ್ನು ಏರ್ಪಡಿಸಲು ಜೇಫ್‌ಕೋರ್ಟ್‌ನವರ ಅಧಿಕಾರ.

(a) ಡೆಪ್ಯೂಟಿ ಕಮ್ಮಿಷನರುಗಳಿಂದ ಮತ್ತು ಕೆಳಗಿನ ಕೋರ್ಟುಗಳಿಂದ ಯಾವ್ಯಾವ ಸಂಗತಿಗಳಲ್ಲಿ ಮತ್ತು ಯಾವ್ಯಾವ ಕಾಲದಲ್ಲಿ ರಿಪೋರ್ಟುಗಳನ್ನು ತರಿಸಿಕೊಳ್ಳಬೇಕೆಂಬುವದು;

(b) ಸಂರಕ್ಷಕರಿಗೆ ಕೊಡತಕ್ಕ ಎಲೊವೆನ್ಸುಗಳ ಕುರಿತು ಮತ್ತು ಅವರಿಂದ ಪಡಕೊಳ್ಳತಕ್ಕ ಜಾಮೀನು ಕುರಿತು ಮತ್ತು ಯಾವ್ಯಾವ ಸಂಗತಿಗಳಲ್ಲಿ ಅಂಥಾ ಎಲೊವೆನ್ಸುಗಳು ಕೊಡತಕ್ಕದ್ದೆಂಬುವದು;

(c) 28 ಮತ್ತು 29ನೇ ಪ್ರಕರಣಗಳಲ್ಲಿ ಸೂಚಿಸಿರುವ ಕೃತ್ಯಗಳನ್ನು ನಡಿಸಲು ಅಪ್ಪಣೆ ಕೇಳಿ ಸಂರಕ್ಷಕರು ಬರಕೊಳ್ಳುವಂತಾ ಅರ್ಜಿಗಳ ಬಾಬಿನಲ್ಲಿ ಅನುಸರಿಸತಕ್ಕ ಕ್ರಮ;

(d) 34ನೇ ಪ್ರಕರಣದ (a), (b), (c), ಮತ್ತು (d) ಕಲಮುಗಳಲ್ಲಿ ನಮೂದಿಸಲ್ಪಟ್ಟಂತಾ ಅನುಜ್ಞೆಗಳನ್ನು ಯಾವ್ಯಾವ ಸಂಗತಿಗಳಲ್ಲಿ ಮಾಡತಕ್ಕದ್ದೆಂಬುವದು;

(e) ಸಂರಕ್ಷಕರು ಒಪ್ಪಿಸಿದ ಮತ್ತು ತೋರಿಸಿದ ಸ್ಟೇಟಮೆಂಟುಗಳನ್ನು ಮತ್ತು ಲೆಕ್ಕಗಳನ್ನು ಜೋಪಾನದಲ್ಲಿ ಇಡುವದು;

(f) ಸಂಬಂಧಪಟ್ಟ ಮನುಷ್ಯರು ಸದರಿ ಸ್ಟೇಟಮೆಂಟುಗಳನ್ನು ಮತ್ತು ಲೆಕ್ಕಗಳನ್ನು ನೋಡುವದು;

(g) ಸಂರಕ್ಷಣೆಯಲ್ಲಿರುವವರಿಗೆ ಸೇರಿದ ಹಣವಿನ ಮತ್ತು ಹಣವಿನ ಬಗ್ಗೆ ಇರುವ ಸೆಕ್ಯೂರಿಟಿಗಳ ಕಾವಲು;

(h) ಸಂರಕ್ಷಣೆಯಲ್ಲಿರುವವರಿಗೆ ಸೇರಿದ ಹಣವನ್ನು ಯಾವ ತರದ ಸೆಕ್ಯೂರಿಟಿಗಳ ರೂಪವಾಗಿ ಇಡಬಹುದೆಂಬುವದು;

(i) ಕೋರ್ಟ್‌ನವರು ಯಾರಬ್ಬಗೆ ಸಂರಕ್ಷಕರನ್ನು ನೇಮಿಸಿದ್ದಾರೋ ಯಾ ವಿಧಿಸಿ ಜೇಲಿದ್ದಾರೋ ಅಂತಾ ಸಂರಕ್ಷಣೆಯಲ್ಲಿರುವವರ ವಿದ್ಯಾಭ್ಯಾಸವನ್ನು ಕುರಿತು, ಅಂತಾ ಸಂರಕ್ಷಕರು ಡಿಪ್ಯೂಟಿ ಕಮ್ಮಿಷನರುಗಳಲ್ಲವಾಗಿದ್ದರೆ;

(j) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವಲ್ಲಿ ಕೋರ್ಟ್‌ನವರ ನಡವಳಿಕೆ ಕುರಿತು.

(2) (1) ನೇ ಉಪ ಪ್ರಕರಣದ (a) ಮತ್ತು (i) ಕಲಮುಗಳ ಮೇರೆಗೆ ಮಾಡಲ್ಪಟ್ಟ ನೇಮಗಳು, ಗವರ್ನಮೆಂಟಿನವರಿಂದ ಮಂಜೂರು ಮಾಡಲ್ಪಡುವವರೆಗೆ, ಫಲಿತಾರ್ಥವುಳ್ಳವುಗಳಾಗಿರಲಿಕ್ಕಿಲ್ಲ; ಅದಲ್ಲದೆ ಈ ಪ್ರಕರಣಕ್ಕನುಗುಣವಾದ ಯಾವ ನೇಮವೂ ಸರಕಾರಿ ಗಜೇಟಿನಲ್ಲಿ ಪ್ರಕಟಿಸಲ್ಪಡುವವರೆಗೆ ಫಲಿತಾರ್ಥವುಳ್ಳದ್ದಾಗಿರಕೂಡದು.

51. ಈ ರೆಗ್ಯುಲೇಷನಿನಿಂದ ರದ್ದು ಮಾಡಲ್ಪಟ್ಟ ಯಾವದಾದರೂ ನಿಬಂಧನೆ ಮೇರೆಗೆ ಒಂದು ಸಿವಿಲ್ ಕೋರ್ಟ್‌ನವರಿಂದ ನೇಮಿಸಲ್ಪಟ್ಟ ಯಾ ಕಾರ್ಯನಿರ್ವಾಹಣ ಸರ್ಟಿಫಿಕೇಟು ಕೊಡಲ್ಪಟ್ಟ ಬಬ್ಬ ಸಂರಕ್ಷಕನು, ನಿರ್ದೇಶಿಸಲ್ಪಡುಹುದಾದ ಮೇರೆಗೆ ವಿನಹಾ, ಅವನು 2ನೇ ಅಧ್ಯಾಯದ ಮೇರೆಗೆ ನೇಮಿಸಲ್ಪಟ್ಟು ಯಾ ವಿಧಿಸಿ ತಿಳಿಸಲ್ಪಟ್ಟಿದ್ದರೆ ಹ್ಯಾಗೋ ಹಾಗೆಯೇ, ಈ ರೆಗ್ಯುಲೇಷನಿನ ನಿಯಮಗಳಿಗೂ ಮತ್ತು ಅದಕ್ಕನುಗುಣವಾಗಿ ಏರ್ಪಟ್ಟ ನೇಮಗಳಿಗೂ ಒಳಪಟ್ಟಿರತಕ್ಕದ್ದು.

ಕೋರ್ಟ್‌ನವರಿಂದ ಮೊದಲೇ ನೇಮಕ ಪಟ್ಟ ಸಂರಕ್ಷಕರಿಗೆ ಈ ರೆಗ್ಯುಲೇಷನಿನ ಪ್ರಯೋಗ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 31ನೇ ಅಧ್ಯಾಯದ ತಿದ್ದುಪಾಟು.

52. ಸಿವಿಲ್ ಪ್ರೊಸೀಜ್ಯೂರ್ ಕೋಡಿನ 31ನೇ ಅಧ್ಯಾಯವನ್ನು ಇದರಿಂದ ಕಾಣಿಸಿದಂತೆ ತಿದ್ದುಪಾಟು ಮಾಡತಕ್ಕದ್ದು; ಅಂದರೆ:—

A.—ಸದರಿ ಕೋಡಿನ 140ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು; ಯಾವದಂದರೆ:—

"ಬಬ್ಬ ಅಪ್ರಾಯಸ್ಥನಿಗೆ, ಆ ಪರವಾಗಿ ತಕ್ಕ ಅಧಿಕಾರ ಇರುವ ಅಧಿಕಾರಸ್ಥರಿಂದ ಮೊಕರೂರು ಮಾಡಲ್ಪಟ್ಟ ಯಾ ಬಿಧಿಸಿ ತಿಳಿಸಲ್ಪಟ್ಟ ಬಬ್ಬ ಸಂರಕ್ಷಕನು ಇರುತ್ತಿದ್ದರೆ, ಸದರಿ ಅಪ್ರಾಯಸ್ಥನ ತರಫಿನಿಂದ ಅಂಥಾ ಸಂರಕ್ಷಕನಲ್ಲದೆ ಬೇರೆ ಯಾರಾದರೂ, ಕೋರ್ಟ್‌ನವರು ತಂಥಾ ಸಂರಕ್ಷಕನಿಗೆ ನೋಟಿಸು ಕೊಟ್ಟು ವ್ಯಾಜ್ಯ ದಾಖಲು ಮಾಡುವದನ್ನು ಕುರಿತು ಅತನಿಗಿರಬಹುದಾದ ಯಾವದಾದರೂ ಅಕ್ಷೇಪಣೆಗಳನ್ನು ಕೇಳಿಕೊಂಡು ಅಪ್ಪಣೆಕೊಟ್ಟ ವಿನಹಾ, ಸದರಿ ಅಪ್ರಾಯಸ್ಥನ ತರಫಿನಿಂದ ವಾಜ್ಯ ದಾಖಲು ಮಾಡಕೂಡದು, ಮತ್ತು, ಅಪ್ರಾಯಸ್ಥನಿಗಾಗಿ ವ್ಯಾಜ್ಯ ದಾಖಲುಮಾಡುವದನ್ನು ಕುರಿತು ಕೇಳುವ ಮನುಷ್ಯನಿಗೆ, ಆರೀತಿ ನಡಕೊಳ್ಳಲಿಕ್ಕೆ ಅವನನ್ನು ಬಿಡುವದು ಅಪ್ರಾಯಸ್ಥನ ಕ್ಷೇಮಲಾಭಕ್ಕಾಗಿಯೇ ಎಂತ ಕೋರ್ಟ್‌ನವರು ಅಭಿಪ್ರಾಯಪಟ್ಟ ಹೊರತು, ಅಂತಾ ಅಪ್ಪಣೆಯನ್ನು ಕೋರ್ಟ್‌ನವರು ಕೊಡಕೂಡದು"

B.—ಸದರಿ ಕೋಡಿನ 443ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು; ಯಾವದಂದರೆ:—

"ಈ ಪರವಾಗಿ ತಕ್ಕ ಅಧಿಕಾರ ಇರುವ ಅಧಿಕಾರಸ್ಥರು ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಯಾ ಇವೆರಡರ ಬಗ್ಗಾಗಿ ಸಂರಕ್ಷಕನನ್ನು ಯಾ ಸಂರಕ್ಷಕರನ್ನು ನೇಮಿಸಿರುವಲ್ಲಿ ಯಾ ವಿಧಿಸಿ ತಿಳಿಸಿರುವಲ್ಲಿ, ಕೋರ್ಟ್‌ನವರು ಅತನನ್ನು, ಯಾ ಸಂಗತ್ಯಾನುಕಾರ, ಅವರಪೈಕಿ ಬಬ್ಬನನ್ನು ಈ ಪ್ರಕರಣಕ್ಕನುಗುಣವಾದ ವ್ಯಾಜ್ಯವನ್ನು ಕುರಿತು ಸಂರಕ್ಷಕನಾಗಿ ನೇಮಿಸತಕ್ಕದ್ದು. ಪರಂತು ಇತರ ಯಾವನೊಬ್ಬನಾದರೂ ಹಾಗೆ ನೇಮಿಸಲ್ಪಡತಕ್ಕದ್ದು ಎಂತ ಕೋರ್ಟ್‌ನವರು ತಿಳಿಕೊಳ್ಳುವದಾದರೆ, ಅದಕ್ಕಾಗಿ ತಕ್ಕ ಕಾರಣಗಳನ್ನು ರಿಕಾರ್ಡ್ ಮಾಡತಕ್ಕದ್ದು."

C.—ಸದರಿ ಕೋಡಿನ 446ನೇ ಪ್ರಕರಣದನಂತರ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಯಾವದಂದರೆ:—

"ಕ್ಷೇಮ ಚಿಂತಕನು ಈಪರವಾಗಿ ತಕ್ಕ ಅಧಿಕಾರವಿರುವ ಅಧಿಕಾರಸ್ಥರಿಂದ ನೇಮಕ ಮಾಡಲ್ಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಸಂರಕ್ಷಕನಲ್ಲವಾಗಿದ್ದರೆ ಮತ್ತು ಆರೀತಿ ನೇಮಕ ಮಾಡಲ್ಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಸಂರಕ್ಷಕನು ಕ್ಷೇಮಚಿಂತಕನ ಬದಲಾಗಿ ನೇಮಿಸಲ್ಪಡಬೇಕೆಂದು ಅಪೇಕ್ಷಿಸಿ ಅದನ್ನು ಕುರಿತು ಮನವಿಮಾಡಿಕೊಂಡರೆ, ಕೋರ್ಟನವರು ಸದರಿ ಕ್ಷೇಮಚಿಂತಕನನ್ನು ತೆಗದುಹಾಕತಕ್ಕದ್ದು, ಪರಂತು ಅಪ್ರಾಯಸ್ಥನ ಕ್ಷೇಮಚಿಂತಕನಾಗಿ ಸಂರಕ್ಷಕನನ್ನು ನೇಮಿಸತಕ್ಕದ್ದಲ್ಲನಾಗಿ ಕೋರ್ಟನವರು ತಿಳಿಕೊಳ್ಳುವದಾದರೆ ಅದನ್ನು ಕುರಿತು ತಮ್ಮ ಕಾರಣಗಳನ್ನು ರಿಕಾರ್ಡು ಮಾಡಿ ಹಾಗೆ ತೆಗದುಹಾಕದೆ ಇರಬಹುದು."

D.—ಸದರಿ ಕೋಡಿನ 461ನೇ ಪ್ರಕರಣದ ಬದಲಾಗಿ ಈ ಕೆಳಗೆ ಬರೆಯವದನ್ನು ಇಡತಕ್ಕದ್ದು, ಯಾವದಂದರೆ:—

ವ್ಯಾಜ್ಯದ ಕುರಿತ ಕ್ಷೇಮಚಿಂತಕನು ಯಾ ರಕ್ಷಿತನು ಡಿಕ್ರಿಮೇರೆಗೆ ಅಪ್ರಾಯಸ್ಥ ಸಬಗ್ಗಾಗಿ ಸೊತ್ತು ತೆಗದುಕೊಳ್ಳುವಿಕೆ.

"461. (1) ವ್ಯಾಜ್ಯದ ಕುರಿತ ಕ್ಷೇಮಚಿಂತಕನು ಅಥವಾ ಸಂರಕ್ಷಕನು ಕೋರ್ಟನವರ ಅಪ್ಪಣೆ ಹೊರತು—

(a) ಡಿಕ್ರಿಯು ಯಾ ಹುಕ್ಕುಂ ಉಂಟಾಗುವ ಮೊದಲು ರಾಜಿಮೂಲಕ, ಅಥವಾ

(b) ಅಪ್ರಾಯಸ್ಥನವರವಾಗಿ ಉಂಟಾಗುವ ಡಿಕ್ರಿಯು ಹುಕ್ಕುಂ ಮೇರೆಗೆ,

ಯಾವ ಹಣವನ್ನಾಗಲೀ ಇತರ ಚರಸೊತ್ತನ್ನಾಗಲೀ ಅಪ್ರಾಯಸ್ಥನಬಗ್ಗಾಗಿ ತೆಗದುಕೊಳ್ಳಕೂಡದು.

"(2) ವ್ಯಾಜ್ಯದ ಕುರಿತ ಕ್ಷೇಮಚಿಂತಕ ಯಾ ಸಂರಕ್ಷಕನು ತಕ್ಕ ಅಧಿಕಾರ ಇರುವ ಅಧಿಕಾರಸ್ಥರಿಂದ ಅಪ್ರಾಯಸ್ಥನ ಆಸ್ತಿ ಕುರಿತು ರಕ್ಷಕನಾಗಿ ನೇಮಿಸಲ್ಪಡಲಿಲ್ಲನಾದಪಕ್ಷದಲ್ಲಿ, ಅಥವಾ ಆರೀತಿ ನೇಮಕಮಾಡಲ್ಪಟ್ಟು ಯಾ ವಿಧಿಸಿ ತಿಳಿಸಲ್ಪಟ್ಟು ಇದ್ದು ಸದರೀ ಹಣ ಯಾ ಇತರ ಚರಸೊತ್ತನ್ನು ತೆಗದುಕೊಳ್ಳಲಿಕ್ಕೆ ಯಾವ ತರವ ಅಯೋಗ್ಯತೆಯೂ ಇಲ್ಲವಾಗಿದ್ದಾನೆಂತ ಕೋರ್ಟನವರಿಗೆ ತಿಳಿದಿರುವಲ್ಲಿ, ಕೋರ್ಟನವರು ಸದರಿ ಸೊತ್ತನ್ನು ತೆಗದುಕೊಳ್ಳಲಿಕ್ಕೆ ಅಪ್ಪಣೆ ಕೊಡುವದಾದರೆ, ಸದರಿ ಸೊತ್ತು ನ್ಯಯವಾಗದಂತೆ ಮತ್ತು ಅದರ ನರಿಯಾದ ವಿನಿಯೋಗವನ್ನು ಭದ್ರಪಡಿಸಲಿಕ್ಕೆ ತಮ್ಮ ಅಭಿಪ್ರಾಯದಲ್ಲಿ ಸಾಕಾಗುವಷ್ಟು ಜಾಮೀನು ಕೊಡಹೇಳಿ ತಕ್ಕ ಅನುಜ್ಞೆಗಳನ್ನು ಸಹಾ ಕೊಡತಕ್ಕದ್ದು."

ಶೆಡ್ಯೂಲ್ ಚಟ್ಟ.

ರದ್ದಾದ ಚಟ್ಟಗಳು.

(2ನೇ ಪ್ರಕರಣ ನೋಡಿರಿ.)

ವಿವರ ಇಸವಿ ಮತ್ತು ನಂಬರು.	ಹೆಸರು ಯಾ ವಿಷಯ.	ರದ್ದಾದ ಸರಿಮಾನವು.
1872ನೇ ವರುಷದ ಏಪ್ರಿಲ್ 20ನೇ ತಾರೀಖು 752ನೇ ನಂ. ರನ ಗವರ್ನರ್‌ಮೆಂಟ್ ಆಫ್ ಇಂಡಿಯ ಫಾರಿನ್ ಡಿಪಾರ್ಟ್‌ಮೆಂಟು ಇಸ್ತಿಹಾರು	ಮೈಸೂರು ಸೀಮೆಯ ಅಪ್ರಾಯಸ್ಥರು, ಕೇವಲ ಬುದ್ಧಿಹೀನರು ಮತ್ತು ಇತರ ಅಯೋಗ್ಯತೆಯುಳ್ಳ ಆಸಾಮಿಗಳು ಇವರ ಕಾವಲು ಮತ್ತು ಸಂರಕ್ಷಣೆಯನ್ನು ಕುರಿತ ನೇಮಗಳು.	22ನೇ ನೇಮ ಮತ್ತು 22ನೇ ನೇಮದಂತೆ ಆದ ಹುಕುಮುಗಳಿಗೆ ಸಮ್ಮಂಧಪಟ್ಟ ಪ್ರಮಟ್ಟು 23ನೇ ನೇಮದ ಭಾಗವಿನಹ ಮತ್ತು 22ನೇ ನೇಮವನ್ನು ಜಾರಿಯಲ್ಲಿ ತರುವಬಗ್ಗೆ ಅವಶ್ಯವಿರುವಷ್ಟು ವಿನಹ, ವಿುಕ್ತಾದ್ದೆಲ್ಲಾ.
ಮೈಸೂರಲ್ಲಿ ಜಾರಿ ಇರುವ 1882ನೇ ಇಸವಿ ನಂ. 14 ನೇ ಆಕ್ಟು.	ಸಿವಿಲ್ ಪ್ರೊಸೀಜ್ಯೂರ್ ಕೋಡು	443ನೇ ಪ್ರಕರಣ 2ನೇ ಕಲಂ ಮತ್ತು 464ನೇ ಪ್ರಕರಣ.
1900ನೇ ವರುಷದ IIIನೇ ನಂಬರಿನ ರೆಗ್ಯುಲೇಷ್ಯನ್	1900ನೇ ವರುಷದ ಮೈಸೂರು ಕೋರ್ಟ್‌ಫೀಸ್ ರೆಗ್ಯುಲೇಷ್ಯನ್	28ನೇ ಪ್ರಕರಣ ಮತ್ತು 1ನೇ ಷೆಡ್ಯೂಲಿನಲ್ಲಿ 9ನೇ ಆರ್ಟಿಕಲ್.

ಕೆ. ಎಸ್. ಸಿ.

ಸಂರಕ್ಷಕರನ್ನು ಮತ್ತು ಸಂರಕ್ಷಣೆಯಲ್ಲಿರುವವರನ್ನು ಕುರಿತ ನಿಬಂಧನೆಯನ್ನು ಒಟ್ಟುಪಡಿಸಿ ತಿದ್ದುಪಾಟು ಮಾಡುವ ಬಗ್ಗೆ ಉಂಟಾದ ರೆಗ್ಯುಲೇಷ್ಯನ್.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು—ಇವುಗಳ ವಿವರ.

ಅಪ್ರಾಯಸ್ಥರ ದೇಹರಕ್ಷಣೆಗೂ ಸಂರಕ್ಷಣೆಗೂ ಸಮ್ಮಂಧಪಟ್ಟ ಈಗ ಜಾರಿಯಲ್ಲಿರುವ ನಿಬಂಧನೆಯು, (ಪುಚ್ಚರಿಗೂ, ಕೇವಲ ಬುತಿಹೀನರಿಗೂ, ಸ್ವಭಾವವಾಪ ದೌರ್ಬಲ್ಯದಿಂದ ಅನರ್ಹರಾಗಿ ಮಾಡಲ್ಪಟ್ಟ ಇತರ ಮನುಷ್ಯರಿಗೂ ಪ್ರಯೋಗವಾಗುವ 22ನೆ ನೇಮ ವಿನಹ ಅಪ್ರಾಯಸ್ಥರಿಗೆ ಸಮ್ಮಂಧಪಡುವ ನಿಯಮಗಳಾಗಿರುವಂತಾ) 1872ನೇ ವರುಷದ ಏಪ್ರಿಲ್ 25ನೇ ತಾರೀಖು 75ನೇ ನಂಬರಿನ ಇಸ್ತಿಹಾರಿನಲ್ಲಿ ಗವರ್ನರ್‌ಮೆಂಟ್ ಆಫ್ ಇಂಡಿಯ (ಫಾರಿನ್ ಡಿಪಾರ್ಟ್‌ಮೆಂಟ್) ಯವರಿಂದ ಮಂಜೂರ್ಮಾಡಲ್ಪಟ್ಟ ನೇಮಗಳಾಗಿ ಇರುತ್ತವೆ. ಈ ನೇಮಗಳು, ಬೆಂಗಾಲಿನಲ್ಲಿನ ಅಪ್ರಾಯಸ್ಥರಿಗೆ ಸಮ್ಮಂಧಪಟ್ಟ 1858ನೇ ವರುಷದ XIನೇ ಆಕ್ಟಿಗೂ, ಬೊಂಬಾಯಲ್ಲಿನ ಅಪ್ರಾಯಸ್ಥರಿಗೆ ಸಮ್ಮಂಧಪಟ್ಟ 1764ನೇ ವರುಷದ XXನೆ ಆಕ್ಟಿಗೂ ಹೆಚ್ಚು ಕಮ್ಮಿಯಾಗಿ

ಅನುಗುಣವಾಗಿರುವದಲ್ಲದೆ, ಬಹುಜ ಅವುಗಳನ್ನೆ ಆಧಾರವಾಗಿ ಮುಳ್ಳದ್ದಾಗಿಯೂ ಇರುತ್ತವೆ. ಇವು ಮತ್ತು ಕೆಲವು ಇತರ ದೇಶೀಯವಾದ ಮತ್ತು ವಿಶೇಷವಾದ ಅಕ್ಟುಗಳು 1891ನೇ ವರುಷದ VIIIನೇ ಅಕ್ಟಿನ ಮೂಲಕ 1890ನೇ ವರುಷದಲ್ಲಿ ಕಡೇ ಸಾರಿ ರದ್ದು ಮಾಡಲ್ಪಟ್ಟಿನ್ತು. ಸದರಿ 1890ನೇ ವರುಷದ VIIIನೇ ಅಕ್ಟಿನಲ್ಲಿ, ಬ್ರಿಟಿಷ್ ಇಂಡಿಯಾದಲ್ಲಿರುವ ಹರ ಮೆಜೆಸ್ಟಿಯವರ ಪ್ರಜೆಗಳ ಸಮಸ್ತ ವರ್ಗದವರಿಗೂ, ಯಾವ ಜಾತಿಗಳಿಗಾಗಲಿ ಯಾವ ಕುಲಗಳಿಗಾಗಲಿ ಅವರು ಸೇರಿ ಇರಲಿ, ಸಾಧ್ಯವಾದ ಮಟ್ಟಿಗೂ ಪ್ರಯೋಗವಾಗತಕ್ಕದ್ದಾಗಿದ್ದು ಸಂರಕ್ಷಕನಿಗೂ ಸಂರಕ್ಷಣೆಯೊಳಗಿರುವವನಿಗೂ ಕಾರಿತಿರುವ ಬಂದು ನಿಬಂಧನೆಯು ಒದಗಿಸಲ್ಪಟ್ಟಿತ್ತು.

1872ನೇ ವರುಷದ ನೇಮಗಳು ಕೆಲವು ಅಂಶಗಳಲ್ಲಿ ಕವ್ಯಾಪ್ತವಾಗಿರುವದರಿಂದ ಅವ್ಯಾಯಸ್ಥರ ಸಂರಕ್ಷಣೆಗೆ ಅವಶ್ಯಗಳ ಸಮ್ಬಂಧಪಡುವ ಮಟ್ಟಿಗೆ ಅವಶ್ಯಗಳಿಗೆ ಬದಲಾಗಿ, 1890ನೇ ವರುಷದ VIIIನೇ ಇಂಡಿಯರ್ ಆಕ್ಟಿಗೆ ಅನುಸರಿಸಿಯೂ, ಸದರೀ ನೇಮಗಳಿಗಿಂತ ಅಧಿಕವಾಗಿ ಗ್ರಹಿಸುವಂತೆಯೂ, ಮತ್ತು ಅವುಗಳಲ್ಲಿಲ್ಲದ ಅನೇಕ ವಿಷಯಗಳನ್ನು ಬೋಟಾಬ್ಯಾಗಿಯೂ ಇರುವಂತೆ ಒಂದು ರೆಗ್ಯುಲೇಷನನ್ನು ನಿರ್ಣಯಿಸಲು ಉದ್ದೇಶಿಸಿರುತ್ತೆ.

ಮನುಷ್ಯರನ್ನು ಹುಚ್ಚರೆಂದು ನಿಶ್ಚಯಿಸಿ ಅವರ ದೇಹಗಳಿಗೂ ಸೊತ್ತುಗಳಿಗೂ ಸಂರಕ್ಷಕರನ್ನು ಮೊಕರರು ಮಾಡುವ ವಿಷಯವು, ಅವ್ಯಾಯಸ್ಥರ ಸಂರಕ್ಷಣೆ ಬಗ್ಗೆ ಉಂಟಾದ ರೆಗ್ಯುಲೇಷನಿನ ಬಂದು ಭಾಗವಾಗಿ ಇಟ್ಟುಕೊಳ್ಳೋಣವು ಅನಾನುಕೂಲವಾಗಿರುವದರಿಂದ, ಆ ವಿಷಯವು ಪ್ರತ್ಯೇಕವಾಗಿ ಆಲೋಚಿಸುವವಕ್ಕೋಸ್ಕರ ಉಳಿಸಲ್ಪಟ್ಟಿರುತ್ತೆ. ಇಷ್ಟರೊಳಗೆ 1872ನೇ ವರುಷದ ನೇಮಗಳು ಎಷ್ಟುಮಟ್ಟಿಗೆ ಹುಚ್ಚರಿಗೆ ಸಮ್ಬಂಧಪಡುತ್ತೊ ಅಷ್ಟುಮಟ್ಟಿಗೆ ಸ್ವಸ್ಥವಾಗಿ ನಿಲ್ಲಿಸಿಕೊಳ್ಳಬೇಕಾಗಿರುತ್ತೆ ಯಾದ್ದರಿಂದ, ಅದು ಶಿಡ್ಯೂಲ್ ಮಟ್ಟಿಗೆಲ್ಲಿ ರದ್ದಾಗಿಲ್ಲದಂತೆ ಕಾಣಿಸಲ್ಪಟ್ಟಿರುತ್ತೆ.

1890ನೇ ವರುಷದ VIIIನೇ ಅಕ್ಟಿನ ನಿಯಮಗಳಲ್ಲಿ ಮಾಡಿರುವ ಅನೇಕ ಬದಲಾವಣೆಗಳು, ಬಂದಕ್ಕೆ ಮತ್ತೊಂದನ್ನು ಹೊಂದಿಸುವ ಕ್ರಮದಲ್ಲಿ ಅವಶ್ಯವಿರುವ ಪದಸಮ್ಬಂಧವಾದ ಬದಲಾವಣೆಗಳಾಗಿರುತ್ತವೆ. ಆ ಪೈಕಿ ವಿವರಿಸಬೇಜಾದ ಕೆಲವು ಇದರಲ್ಲಿ ಸೂಚಿಸಿರುತ್ತೆ.

ಈ ರೆಗ್ಯುಲೇಷನಿನಲ್ಲೆಲ್ಲಾ ಕೋರ್ಟ್ಸ್ ಆಫ್ ವಾರ್ಡ್ಸಿಗಳಿಗೂ ಟಿಪ್ಪರ್ಸ್ ಹೈಕೋರ್ಟ್ಸಿಗಳಿಗೂ ಸಮ್ಬಂಧ ಸೂಚಿಸೋಣವನ್ನು ಬಿಟ್ಟಿರುತ್ತೆ.

೧ನೇ ಪ್ರಕರಣ (1)ನೆ ಕಲಂ "ಅವ್ಯಾಯಸ್ಥ" ಎಂಬುವದರ ಅರ್ಥ ವಿವರಣೆಯು ಇಂಡಿಯರ್ ಆಕ್ಟಿನಲ್ಲಿರುವ ಅದೇ ಪದದ ಅರ್ಥವಿವರಣೆಯು ಬೇರೆಬೇರೆಯಾಗಿದೆ. ಸದರಿ ಆಕ್ಟಿನಲ್ಲಿರುವ ಆ ಪದದ ಅರ್ಥವಿವರಣೆಯು, ಮೈಸೂರಲ್ಲಿ ಜಾರಿ ಇಲ್ಲದಂತಾ ಇಂಡಿಯರ್ ಮೆಜಾರಿಟಿ ಆಕ್ಟಿಗೆ ಅನುಗುಣವಾಗಿದೆ. ಪರಂತು ಇಲ್ಲಿ ಇರುವ ಆ ಪದದ ಅರ್ಥವಿವರಣೆಯು, ಜಾರಿಯಲ್ಲಿರುವ ಯಾವ ನಿಬಂಧನೆ ಪ್ರಕಾರ "16 ವರುಷದ ವಯಸ್ಸನ್ನು ಪೂರ್ತಿ ಮಾಡದಿರುವ ಪ್ರತಿ ಮನುಷ್ಯನನ್ನು ಅವ್ಯಾಯಸ್ಥನೆಂದು" ಎಣಿಸಬೇಕಾಗಿರುತ್ತೋ ಆ ನಿಬಂಧನೆಯು ನಿಯಮಗಳಿಗೆ ಅನುಸಾರವಾಗಿರುತ್ತೆ. ಜಾರಿಯಲ್ಲಿರುವ ನಿಬಂಧನೆಯು ನಿಯಮವನ್ನು ಬಿಡುಸದರೆಲ್ಲಿಯೂ, (ಇಂಡಿಯರ್ ಮೆಜಾರಿಟಿ ಆಕ್ಟಿನಂತೆ) ಯಾವ ಅವ್ಯಾಯಸ್ಥನ ಕರೀರಕ್ಕಾಗಲಿ ಅಥವಾ ಸೊತ್ತಿಗಾಗಲಿ ಅತನಿಗೆ 18 ವರುಷದ ವಯಸ್ಸು ಬರುವದಕ್ಕೆ ಮುಂಚೆ ಒಬ್ಬ ಸಂರಕ್ಷಕನು ಕೋರ್ಟಿನವರಿಂದ ಮೊಕರರ್ಯಾಡಲ್ಪಡುತ್ತಾನೋ ಅಂತಾವನ ವ್ಯಾಯದ ವಯಸ್ಸಿಗೂ ಮತ್ತು ಇತರ ಎಲ್ಲಾ ಮನುಷ್ಯರ ವ್ಯಾಯದ ವಯಸ್ಸಿಗೂ ಒಂದು ತಾರುತಮ್ಯ ಮಾಡುವದರಲ್ಲಿ ಸಹ ಯಾವ ಪ್ರಯೋಜನವೂ ಇಲ್ಲವೆಂದು ಗವರ್ನಮೆಂಟಿನವರು ಎಣಿಸುತ್ತಾರೆ. ಇಂಡಿಯರ್ ಸಕ್ಸೆಷನ್ ಆಕ್ಟಿನ 3ನೇ ಪ್ರಕರಣದಲ್ಲಿರುವ ಅರ್ಥ ವಿವರಣೆಗೂ ಮತ್ತು 1903ನೇ ವರುಷದ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನಿನ 3ನೇ ಪ್ರಕರಣದಲ್ಲಿರುವ ಅರ್ಥವಿವರಣೆಗೂ, ತಾರತಮ್ಯ ನೋಡಬೇಕು.

1872ನೇ ವರುಷದ ನೇಮಗಳ ಪೈಕಿ ಯಾವ ನೇಮವನ್ನು ನೋಡಬೇಕು.

3ನೇ ಪ್ರಕರಣ (4)ನೆ ಕಲಂ. ಈ ಕಲಮಿನಲ್ಲಿ ಕೊಟ್ಟಿರುವ "ಡಿಸ್ಟ್ರಿಕ್ಟ್ ಕೋರ್ಟು" ಎಂಬುವದರ ಅರ್ಥ ವಿವರಣೆಯು, 1901ನೇ ವರುಷದ VIIನೇ ನಂಬರಿನ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿಂದ ತೆಗೆಯಲ್ಪಟ್ಟಿರುತ್ತೆ.

ಅದೇರೀತಿಯಾಗಿ 4ನೇ ಪ್ರಕರಣವೂ ಸಹ ಇರುತ್ತ. ಈ ರೆಗ್ಯುಲೇಷನಿನ ಪ್ರಕಾರ ಬಂದು ಡಿಸ್ಟ್ರಿಕ್ಟ್ ಕೋರ್ಟಿಗೆ ಇರುವ ಉದ್ಯೋಗಗಳು, ಡಿಸ್ಟ್ರಿಕ್ಟ್ ಕೋರ್ಟಿನ ಕೆಳಗಿನ ಕೋರ್ಟುಗಳಿಗೆ ಕೊಡಲ್ಪಡುವ ಬಗ್ಗೆ ಈ ಪ್ರಕರಣದಲ್ಲಿ ಅವಕಾಶ ಉಂಟುಮಾಡಿರುತ್ತ. ಜಾರಿಯಲ್ಲಿರುವ ನೇಮಗಳ ಪ್ರಕಾರ ಸಂರಕ್ಷಕರನ್ನು ಮೊಕರರ್ಯಾಡುವದಕ್ಕೋಸ್ಕರವಾದ ಅರ್ಜಿಗಳನ್ನು ಒಡದು ನಿರ್ಣಾನ ಮಾಡುವದಕ್ಕೆ ಸಬಾರ್ಡಿನೇಟ್ ಜಡ್ಜಿಯವರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. (೨ನೇ ನೇಮದ ಷಿಡ್ಯೂಲನ್ನು ನೋಡಬೇಕು.)

ಇದಕ್ಕೆ ಸಮವಾಗಿರುವ ಇಂಡಿಯರ್ ಆಕ್ಟಿನ 5೨ನೇ ಪ್ರಕರಣವು, ಇಂಡಿಯರ್ ಮೆಜಾರಿಟಿ ಆಕ್ಟಿಗೆ ಸಮ್ಬಂಧಪಡುವದರಿಂದ, ಬಿಡಲ್ಪಟ್ಟಿರುತ್ತೆ.

1890ನೇ ವರುಷದ VIIIನೇ ನಂಬರಿನ ಆಕ್ಟಿನ ೨೨ನೇ ಪ್ರಕರಣದ ಎಲ್ಲಾ ಉಪಕಲಮೂ ಅದೇರೀತಿಯಲ್ಲಿ ವರ್ಜಿಸಲ್ಪಟ್ಟಿದೆ. ಯಾತಕ್ಕೆಂದರೆ ಅವರಿಂದ ತಿದ್ದುಪಾಟು ಆಗಿರುವ ಸಿವಿಲ್ ಪ್ರೊಸೀಜರ್ ಕೋಡಿನ 461ನೇ ಪ್ರಕರಣವು ಇದರಿಂದ ಬರುವ ಕಾರಣಗಳಿಗಾಗಿ ಪ್ರಯೋಗವಾಗತಕ್ಕದ್ದಾಗಿಲ್ಲ. ಅವು ಯಾವವೆಂದರೆ :—

ಮೊದಲನೇದು, ಸದರಿ ಕೋಡಿನ 188ನೇ ವರುಷದಲ್ಲಿ ಮೈಸೂರಿಗೆ ಪ್ರಯೋಗ ಮಾಡಲ್ಪಟ್ಟಿಗ, (ಅಸ್ಯಾಸ್ಯಗಳು ಮತ್ತು ನೇಪಿ ಸ್ಟೇಟ್ಸ್‌ಗಳು ಇವುಗಳನ್ನು ಅಳವಡಿಸಿಕೊಂಡಾಗಲಿ ಅಂತಾಗಳ ಮೇಲೆಯಾಗಲಿ ಆಗುವ ದಾವೆಗಳ ಸಮ್ಬಂಧವಾಗಿರುವ) ಸದರಿ ಕೋಡಿನ XXVIIIನೇ ಅಧ್ಯಾಯವು ವರ್ಜಿಸಲ್ಪಟ್ಟಿತ್ತು; ಎರಡನೆಯದು—ಅವ್ಯಾಯಸ್ಥರಾದಾಗಲಿ ಅವ್ಯಾಯಸ್ಥರ ಮೇಲಾಗಲಿ ಅಥವಾ ಚಿತ್ತಸ್ವಾಸ್ಥ್ಯತೆ ಇಲ್ಲದವರಾದಾಗಲಿ ಅಂತಾವರ ಮೇಲಾಗಲಿ ಆಗುವ ದಾವೆಗಳ ಸಮ್ಬಂಧವಾಗಿ, ಸ್ಥಳಿಕ ನೇಮಗಳ್ಯಾವವೂ ಜಾರಿಯಲ್ಲಿಲ್ಲ. XXVIIIನೇ ಅಧ್ಯಾಯವು "ವಾರ್ಡ್ಸ್ ಆಫ್ ಕೋರ್ಟ್" ಎಂದು ಕರೆಯಲ್ಪಡುವ ಕೋರ್ಟಿನವರ ಸಂರಕ್ಷಣೆಯಲ್ಲಿರುವವರಿಗೆ ಪ್ರಯೋಗವಾಗತಕ್ಕದ್ದಾಗಿ ಈ ರೆಗ್ಯುಲೇಷನಿನಲ್ಲಿ ಉದ್ದೇಶಿಸಲ್ಪಟ್ಟಿದೆ ಯಾದ್ದರಿಂದಲೂ, ಸದರಿ ಕೋಡಿನ 461ನೇ ನೂಲಪ್ರಕರಣವು ಅನುಪಯುಕ್ತವಾಗಿದೆ. ಅವಕಾಶಾಣ, ಅದು 413ನೇ ಪ್ರಕರಣದ ಎಕ್ಸಾನೆ ಎಕ್ಸಾಮಿನೇಷನ್ ರದ್ದಾಗುವದಕ್ಕೆ ಶಿಡ್ಯೂಲ್ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ.

20-11-03

ಕೆ. ಎಸ್. ಚೆಂಜ್ಯಕೇಶವ ಅಯ್ಯಂಗಾರ್.